ಮುಂಜಾವು

ವಾರಪತ್ರಿಕೆ.

ಸಂಪಾದಕ: ಸರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

5ನೇ ವರ್ಷ 37ನೇ ಸಂಚಿಕೆ ಕೊಪ್ಪ 7-6-1987 ಭಾನುವಾರ ಬೆಲೆ 50 ಪೈಸೆ

ಈಶನ್‌ಗೆ ತಪ್ಪಿದ ಸಿಂಗಪುರ 'ಬಸ್'

ಸಿಂಗಪುರದಲ್ಲಿ ನಡೆಯಲಿರುವ ಏಷ್ಯನ್ ಟ್ರ್ಯಾಕ್ ಅಂಡ್ ಫೀಲ್ಡ್ ಕೂಟದಲ್ಲಿ ಭಾಗವಹಿಸಬಹುದಾದ ಸ್ಪರ್ಧಿಗಳ ಆಯ್ಕೆಗಾಗಿ ದಿಲ್ಲಿಯಲ್ಲಿ ನಡೆದ ರಾಷ್ಟ್ರೀಯ ಮಾಸ್ಟರ್ಸ್ ಕೂಟದ ಶಾಟ್ ಪುಟ್ ಸ್ಪರ್ಧೆಯಲ್ಲಿ ನನ್ನ ಈಶನ್ ಅರ್ಹತಾ ಮಟ್ಟ ಮುಟ್ಟುವಲ್ಲಿ ಸಫಲರಾಗಲಿಲ್ಲ.

ಅರ್ಹತಾ ಮಟ್ಟ 17.51 ಮೀ. ಇದ್ದು, 1985ರ ಜಕಾರ್ತಾ ಏಷ್ಯನ್ ಕೂಟದಲ್ಲಿ ಸ್ವರ್ಣ ಗೆದ್ದಿದ್ದ ಬಿಹಾರದ ಬಲ್ವಿಂದರ್ ಸಿಂಗ್ ಮಾತ್ರ 17.92 ಮೀ. ದೂರ ಸಾಧಿಸುವ ಮೂಲಕ ಸಿಂಗಪುರಕ್ಕೆ ತಮ್ಮ ಸ್ಥಾನ ಕಾದಿರಿಸಿಕೊಂಡರು. ಕಳೆದ ವಾರ ದಿಲ್ಲಿಯಲ್ಲೇ ನಡೆದ ಮೊದಲನೇ ಮಾಸ್ಟರ್ಸ್ ಕೂಟದಲ್ಲಿ ಈಶನ್ ಮೂರನೇ ಸ್ಥಾನ ಪಡೆದಿದ್ದರು. ಮೊದಲ ಸ್ಥಾನ ಪಡೆದ ಬಲ್ವಿಂದರ್ 17.33 ಮೀ. ಸಾಧಿಸಿದ್ದರು.

ಈಗಷ್ಟೇ ಸಾಧನೆಯ ಮೆಟ್ಟಿಲೇರ ತೊಡಗಿರುವ ಈಶನ್ ಇದರಿಂದ ನಿರಾಶರಾಗದೆ ಇನ್ನೂ ಹೆಚ್ಚಿನ ಸಾಧನೆಗಳನ್ನು ಮಾಡಲೆಂದು ಆಶಿಸೋಣ.

ಕೊಪ್ಪಕ್ಕೆ ಜೀವವಿಮೆ ಶಾಖಾ ಕಚೇರಿ

ಕೊಪ್ಪ: ಮಲೆನಾಡಿನ ಈ ಭಾಗದ ಜೀವ ವಿಮಾ ಪಾಲಿಸಿದಾರರ ಬಹು ದಿನಗಳ ಬೇಡಿಕೆಯಾದ ಜೀವವಿಮೆ ಶಾಖಾ ಕಚೇರಿಯೊಂದು ಇಲ್ಲಿಗೆ ಮಂಜೂರಾಗಿದ್ದು, ಇಷ್ಟರಲ್ಲೇ ಕಾರ್ಯಾರಂಭ ಮಾಡಲಿದೆಯೆಂದು ತಿಳಿದು ಬಂದಿದೆ.

ಎಂ. ರಾಮಚಂದ್ರ ರಾವ್ ಎಂಬವರನ್ನು ಈ ಶಾಖೆಗೆ ಮ್ಯಾನೇಜರ್ ಆಗಿ ನಿಯುಕ್ತಿ ಮಾಡಲಾಗಿದೆಯೆಂದೂ ಗೊತ್ತಾಗಿದೆ.

ಶಾಖಾ ಕಚೇರಿಗೆ ಸೂಕ್ತ ಕಟ್ಟಡಕ್ಕಾಗಿ ಹುಡುಕಾಟ ನಡೆದಿದೆ. ಕಾಚಕಲ್ ರಸ್ತೆಯಲ್ಲಿರುವ ರಾಮಯ್ಯ ಎಂಬವರ (ಉತ್ತಪ್ಪನವರ ಅಳಿಯ) ಹೊಸ ಕಟ್ಟಡ ಆಯ್ಕೆಯಾಗುವ ನಿರೀಕ್ಷೆಯಿದೆ ಎನ್ನಲಾಗಿದೆ. ಅದಕ್ಕಾಗಿ ಕಡತಗಳ ತಯಾರಿ ನಡೆಯುತ್ತಿದೆ.

ಸೂಕ್ತ ಕಟ್ಟಡ ದೊರಕುವುದೊಂದೇ ಉಳಿದಿರುವ ಪ್ರಶ್ನೆಯಾಗಿದ್ದು, ಇನ್ನೊಂದೆರಡು ತಿಂಗಳೊಳಗೆ ಶಾಖೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ಅಧಿಕಾರಿಗಳಿಗೆ ಬಡ್ತಿ, ವರ್ಗ

ಈ ಮಧ್ಯೆ, ಇಲ್ಲಿ ಅಭಿವೃದ್ಧಿ ಅಧಿಕಾರಿಗಳಾಗಿದ್ದ ಟಿ. ಆರ್. ಆಚಾರ್ಯ ಮತ್ತು ಅನಂತರಾಮಯ್ಯ ಅವರುಗಳಿಗೆ ಅಸಿಸ್ಟೆಂಟ್ ಬ್ರ್ಯಾಂಚ್ ಮ್ಯಾನೇಜರ್ ಹುದ್ದೆಗೆ ಬಡ್ತಿ ದೊರೆತಿದ್ದು, ಆಚಾರ್ಯ ಅವರು ಕೊಡಗಿನ ವೀರಾಜಪೇಟೆ ಶಾಖೆಯಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ. ಅನಂತರಾಮಯ್ಯ ಅವರಿಗೆ ಹೊಸ ಹುದ್ದೆಯ ಸ್ಥಳ ಇನ್ನೂ ಸೂಚಿತವಾಗಿಲ್ಲ.

ಕೊಪ್ಪಕ್ಕೆ ಶಾಖೆ ಮಂಜೂರಾಗುವುದಕ್ಕೆ ಈ ಇಬ್ಬರು ಅಧಿಕಾರಿಗಳ ಪ್ರಯತ್ನವೇ ಮುಖ್ಯ ಕಾರಣವಾಗಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದುದು.

ಸಿಂಹನಗದ್ದೆಯನ್ನು ಪ್ರವಾಸಿ ಕೇಂದ್ರವಾಗಿಸಲು ಮನವಿ

ನರಸಿಂಹರಾಜಪುರ: ಇಲ್ಲಿನ ಜೈನ ತೀರ್ಥ ಕ್ಷೇತ್ರವಾದ ಸಿಂಹನಗದ್ದೆಯನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವಂತೆ ರಾಜ್ಯ ಸರ್ಕಾರದ ಮೇಲೆ ಪ್ರಭಾವ ಬೀರಬೇಕೆಂದು ಈಚೆಗೆ ಇಲ್ಲಿಗೆ ಭೇಟಿ ನೀಡಿದ್ದ ರಾಜ್ಯ ಮದ್ಯಪಾನ ಸಂಯಮ ಮಂಡಲಿಯ ಅಧ್ಯಕ್ಷ ಆರ್. ಎಲ್. ಲಕ್ಷ್ಮೀಪತಿಯವರಿಗೆ ಮನವಿಯೊಂದನ್ನು ಸಲ್ಲಿಸಲಾಯಿತು.

ದರೋಡೆಗಳ ವಿರುದ್ಧ ಬಿಗಿ ಪಹರೆ : ಭಯಗೊಳ್ಳದಿರಲು ನಾಗರಿಕರಿಗೆ ಮನವಿ

ಕೊಪ್ಪ: ರಾಜ್ಯದ ಹಲವೆಡೆ ಪುನಃ ದರೋಡೆಯ ಪ್ರಕರಣಗಳು ಹೆಚ್ಚಿರುವ ಹಿನ್ನೆಲೆಯಲ್ಲಿ ಎಲ್ಲಾ ಪೇಟೆ-ಪಟ್ಟಣಗಳಲ್ಲೂ ರಾತ್ರಿ ಶಸ್ತ್ರಸಜ್ಜಿತ ಪೋಲೀಸ್ ಗಸ್ತನ್ನು ಏರ್ಪಡಿಸಲು ಇಲಾಖೆ ನಿರ್ಧರಿಸಿದ್ದು, ಕೊಪ್ಪ ಮತ್ತಿತರ ಪೇಟೆಗಳಲ್ಲೂ ಈ ವ್ಯವಸ್ಥೆಯನ್ನು ಇಷ್ಟರಲ್ಲೇ ಮಾಡಲಾಗುವುದೆಂದು ಸರ್ಕಲ್ ಇನ್‌ಸ್ಪೆಕ್ಟರ್ ಕೇಶವಾನಂದ ತಿಳಿಸಿದ್ದಾರೆ.

ನಾಗರಿಕರು ರಾತ್ರಿ ವೇಳೆ ಇಂಥ ಗಸ್ತನ್ನು ಕಂಡು ಅನಗತ್ಯವಾಗಿ ಭಯ ಬೀಳಬಾರದೆಂದೂ ಅವರು ಮನವಿ ಮಾಡಿದ್ದಾರೆ.

ಶಾಂತಿ ಸಭೆ

ಮೇಲಿನ ಪೇಟೆಯಲ್ಲಿ ಈಚೆಗೆ ನಡೆದ ವೈಯಕ್ತಿಕ ಹೊಡೆದಾಟದಿಂದ ಕೋಮು ಗಲಭೆ ನಡೆವ ಸಾಧ್ಯತೆಯಿದ್ದ ಬಗ್ಗೆ ಮುಂಜಾಗ್ರತೆಯಾಗಿ ಜೂನ್ 1ರಂದು ಅವರ ನೇತೃತ್ವದಲ್ಲಿ ಶಾಂತಿ ಸಭೆ ನಡೆದು ಎರಡೂ ಕಡೆಯವರು ಶಾಂತಿ ಕಾಪಾಡಿಕೊಂಡು ಬರುವಂತೆ ಮನವಿ ಮಾಡಲಾಯಿತಲ್ಲದೆ, ಎರಡೂ ಕಡೆಯ ಆಪಾದಿತರನ್ನೂ ಕರೆಸಿ ಸಂಧಾನದ ಮೂಲಕ ಜಗಳ ಬಗೆಹರಿಸುವ ಪ್ರಯತ್ನ ಮಾಡಬೇಕೆಂದೂ ನಿರ್ಧರಿಸಲಾಯಿತು.

ಪಂಚಾಯ್ತಿ ನೌಕರರ ಬವಣೆ

ಜಯಪುರ: ಅನೇಕ ವರ್ಷಗಳಿಂದ ಗ್ರಾಮ ಪಂಚಾಯ್ತಿಗಳಲ್ಲಿ ದುಡಿಯುತ್ತಿರುವ ಜವಾನರು, ವಾಟರ್ ಮೆನ್, ಬಿಲ್ ಕಲೆಕ್ಟರ್‌ಗಳು ಸೇವಾಭದ್ರತೆ, ಬಡ್ತಿ ಮುಂತಾದ ಸೌಲತ್ತುಗಳಿಂದ ವಂಚಿತರಾಗಿದ್ದಾರೆ. ಜಿಲ್ಲಾ ಪರಿಷತ್ತಾದರೂ ಈ ಕಡೆ ಗಮನ ಹರಿಸಿ ಇವರನ್ನು ಖಾಯಂಗೊಳಿಸ ಬೇಕೆಂದು ಈ ನೌಕರರು ಒತ್ತಾಯಿಸಿದ್ದಾರೆ.

(ವರದಿ: ಎಂ. ವಿ. ಗಂಗಾಧರ್.)

ಶೃಂಗೇರಿ ತಾಲ್ಲೂಕಿನಲ್ಲಿ ಪಡಿತರ ಸಕ್ಕರೆಯ ಅಸಮರ್ಪಕ ಹಂಚಿಕೆ: ಮಠಕ್ಕೆ ಸಿಂಹಪಾಲು

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಸುಮಾರು 35 ಸಾವಿರ ಜನಸಂಖ್ಯೆ ಇರುವ ಈ ತಾಲ್ಲೂಕಿಗೆ ಹಿಂದೆ 120 ಕ್ವಿಂಟಾಲ್ ಸಕ್ಕರೆ ಬರುತ್ತಿದ್ದುದು ಈಗ 100 ಕ್ವಿಂಟಾಲಿಗೆ ಕುಸಿದಿರುವುದು ಸಾಲದೆಂಬಂತೆ, ಬಂದಷ್ಟನ್ನು ಸಹ ಬೇಕಾಬಿಟ್ಟಿಯಾಗಿ ಅಲಾಟ್‌ಮೆಂಟ್ ಹಾಕಲಾಗುತ್ತಿದೆ ಎಂದು ಕಾರ್ಡುದಾರರು, ಸೊಸೈಟಿಗಳವರು ದೂರುತ್ತಿದ್ದಾರೆ.

400-500 ಪಡಿತರ ಕಾರ್ಡುಗಳಿರುವ ಸೊಸೈಟಿಗಳಿಗೆ ಕೇವಲ 4-5 ಕ್ವಿಂಟಾಲ್ ಮಾತ್ರ ಒದಗಿಸುತ್ತಿದ್ದು, ಮಠಕ್ಕೆ 10 ಕ್ವಿಂಟಾಲ್ ಮತ್ತು ಮಠದ ಆಸ್ಪತ್ರೆಗೆಂದು 2 ಕ್ವಿಂಟಾಲ್ ಪಡಿತರ ಸಕ್ಕರೆಯನ್ನೇ ನೀಡುತ್ತಿರುವ ಬಗ್ಗೆ ಜನರಲ್ಲಿ ತೀವ್ರ ಅಸಮಾಧಾನವಿದೆ.

ತಹಸೀಲ್ದಾರ್ ಪ್ರಭಾಕರ ಶರ್ಮ ಮತ್ತು ಉನ್ನತ ಅಧಿಕಾರಿಗಳ ಮಠವೊಂದಿಗಿನ ನೆಂಟಸ್ತಿಕೆಯಿಂದ ಈ ಕ್ರಮ ಹುಟ್ಟಿಕೊಂಡಿದ್ದು, ಈಗ ಪಡಿತರ ಪೂರೈಕೆ ಜಿಲ್ಲಾ ಪರಿಷತ್‌ಗೆ ವರ್ಗಾವಣೆಗೊಂಡ ಮೇಲೆ ಬಿಡಿಓ ಕೂಡ ಇದೇ ಪರಿಪಾಠವನ್ನೇ ಮುಂದುವರಿಸಿರುವುದಾಗಿ ತಿಳಿದುಬಂದಿದೆ.

ಧರ್ಮಾರ್ಥ ಆಸ್ಪತ್ರೆಯೊಂದಕ್ಕೆ ಸ್ವಲ್ಪ ಹೆಚ್ಚುವರಿ ಸಕ್ಕರೆ ಕೊಡುವುದನ್ನು ಒಂದು ವೇಳೆ ಜನ ಮನ್ನಿಸಬಹುದಾದರೂ, ಇಷ್ಟೊಂದು ಪ್ರಮಾಣವನ್ನಲ್ಲ. ಪಡಿತರ ವ್ಯವಸ್ಥೆಯಲ್ಲಿ ಮಠವೇ ಆಗಲಿ, ಯಾವುದೇ ಖಾಸಗಿಯವರಿಗೆ 10 ಕ್ವಿಂಟಾಲ್‌ಗಳಷ್ಟು ಬೃಹತ್ ಪ್ರಮಾಣದಲ್ಲಿ ಕೋಟಾ ಸಕ್ಕರೆಯನ್ನು ಯಾವ ನೀತಿಯಂತೆ ಕೊಡುತ್ತಾರೋ ತಿಳಿಯಬೇಕಾಗಿದೆ.

ಜನಸಾಮಾನ್ಯರಿಗೆ ಕಡೇ ಪಕ್ಷ ಟೀ-ಕಾಫಿ ಕುಡಿಯಲಾದರೂ ತಿಂಗಳಿಗೆ 3-4 ಕಿಲೋಗಳಷ್ಟಾದರೂ ಸಕ್ಕರೆ ಸಿಕ್ಕುವಂತಾಗಲಿ ಎಂದು ಕಾರ್ಡ್‌ದಾರ ಶ್ರೀಸಾಮಾನ್ಯರು ಹೇಳುತ್ತಿದ್ದಾರೆ.

ಕೊಪ್ಪ ಡಿ ಎಫ್ ಒ ಆಗಿ ಕೃಷ್ಣಸಿಂಗ್ ಸುಗಾರ್

ಕೊಪ್ಪ: ಅತ್ಯಂತ ದಕ್ಷ ಮತ್ತು ಪ್ರಜ್ಞಾವಂತ ಅಧಿಕಾರಿಯಾಗಿದ್ದ ವಿನಯ್ ಲೂಥ್ರ ಅವರು ವರ್ಗವಾದ ನಂತರ ಚಿಕ್ಕಮಗಳೂರಿನ ಸರ್ವೆ ಡಿ ಎಫ್ ಒ ರವರ ಚಾರ್ಜ್‌ನಲ್ಲಿದ್ದ ಇಲ್ಲಿನ ಅರಣ್ಯ ವಿಭಾಗಕ್ಕೆ ಕೃಷ್ಣ ಸಿಂಗ್ ಸುಗಾರ್ ಡಿ.ಎಫ್.ಒ. ಆಗಿ ಅಧಿಕಾರ ಸ್ವೀಕರಿಸಿದ್ದಾರೆ.

ನರಸಿಂಹರಾಜಪುರ ತಾಲ್ಲೂಕಿನ ಮಂಡಲ ಪ್ರಧಾನರು — 2

ಬಾಳೆ ಮಂಡಲ

ರೈತಾಧ್ಯಕ್ಷ ‘ಬಾಸುತಿ’

51 ರ ಹರೆಯದ ಬಾಚಿಕೊಪ್ಪ ಸುಬ್ಬಯ್ಯ ಗೌಡರ ಮಗ ತಿಮ್ಮಯ್ಯ (ಬಾಸುತಿ) ಬಿ. ಎ. ಪದವಿ ಪಡೆದವರು. ಓದಿನ ದಿನಗಳಲ್ಲಿ ಬಾಸುತಿ ಎಂದು ಪರಿಚಿತರಾದ ಬಿ. ಎಸ್. ತಿಮ್ಮಯ್ಯ ಭದ್ರಾ ಜಲಾಶಯದ ಮುಳುಗಡೆ ರೈತರಾಗಿ ಬಾಳೆ ಮಂಡಲದ ವಗಡೆ ಗ್ರಾಮದ ಮುಳುವಳ್ಳಿಯಲ್ಲಿ ಬಂದು ನೆಲೆಸಿ ತಮ್ಮ ರೈತ ವೃತ್ತಿಯನ್ನೇ ಮುಂದುವರಿಸಿದರು. ನರಸಿಂಹರಾಜಪುರದ ವ್ಯವಸಾಯ ಸೇವಾ ಸಹಕಾರ ಸಂಘದ ಗೌ|| ಕಾರ್ಯದರ್ಶಿಯಾಗಿ, ನಂತರ ಅಧ್ಯಕ್ಷರಾದರು. ನಂತರ ಭೂ ಬ್ಯಾಂಕಿನ ಅಧ್ಯಕ್ಷರೂ ಆಗಿದ್ದರು.

1968 ರಿಂದ ಬಾಳೆ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿರುವ ಬಾಸುತಿಯವರು 18 ವರ್ಷ ಕಾಲ ಕಾಂಗ್ರೆಸ್ ಸದಸ್ಯರಾಗಿ ಮುಂದಾಳತ್ವ ವಹಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ಪಕ್ಷ ರಾಜಕೀಯವನ್ನು ತೊರೆದು ತಾಲ್ಲೂಕ್ ರೈತ ಸಂಘದ ಅಧ್ಯಕ್ಷರಾಗಿ ಚಿರಪರಿಚಿತರಾದರು.

ಮಂಡಲದ ಚುನಾವಣೆಯಲ್ಲಿ ಜನತಾ ಪಕ್ಷದಿಂದ ಆಯ್ಕೆಯಾಗಿ ನಂತರ ಅಧ್ಯಕ್ಷರೂ ಆದ ತಿಮ್ಮಯ್ಯನವರಿಗೆ ಶುಭ ಕೋರಿ ಮುಂದುವರಿಯುತ್ತಾ........

“ಗೆಜ್ಜೆ ಕಾಲಿನ ಬಸವಣ್ಣಾ,
ನ.... ಎತ್ತೀ, ಬಾರೋ.... ರೋ.... ....”

ಎಂದು ಜೋರಾಗಿ ದನಿ ಏರಿಸುತ್ತಾ, ಸಣ್ಣದಾಗಿ ದನಿ ಇಳಿಸುತ್ತಾ, ಆರಂಬದ ಪ್ರಾರಂಭಕ್ಕೆ ಗೊಬ್ಬರದ ಗಾಡಿಯನ್ನು ಗದ್ದೆಗೆ ಸಾಗಿಸುತ್ತಾ “ಹೋಲಿ” (ಓಲಿ) ಕೊಡುವ ರೈತರು “ಬಾರೋ.... ರೋ.... ತಿಮ್ಮಣ್ಣಾ....” ಎಂದು ಸೇರಿಸಿ ಹಾಡಿದರೆ ಆಶ್ಚರ್ಯವಿಲ್ಲ. ತಾಲ್ಲೂಕಿನಾದ್ಯಂತ ರೈತರು ಮರೆಯದ ವ್ಯಕ್ತಿಯಾಗಿ ಉಳಿದುಕೊಂಡ ತಿಮ್ಮಯ್ಯ, ಚೋಟಿ ಪಂಚೆ (ಸಣ್ಣ ಕಚ್ಚೆ ಪಂಚೆ) ಉಟ್ಟು ದೊಗಲೆ ಅಂಗಿ ತೊಟ್ಟು, ಹಸಿರು ಟೋಪ್ಪಿ ಇಟ್ಟು ಜಾನಪದ ನೃತ್ಯ–ಗೀತೆಗಳೊಂದಿಗೆ ರೈತರೊಂದಿಗೆ ಕುಣಿಯುತ್ತಾ, ರೈತ ಸಮಸ್ಯೆಗಳನ್ನ ಘೋಷಣೆಯಾಗಿ ಕೂಗುತ್ತಾ ಬಿ. ಎಚ್. ಕೈಮರದಲ್ಲಿ ಪೋಲಿಸರ ಲಾಠಿಗೆ ಧೂಳೀಪಟವಾದ ರೈತ ಸಂಘ–ಇದರ ಅಧ್ಯಕ್ಷ ತಿಮ್ಮಯ್ಯ ಹಾಸಿಗೆ ಬಡಿದಂತೆ ಬಡಿಸಿಕೊಂಡದ್ದು ಒಂದು ಹಳೆಯ ನೆನಪು.

ಆದರೆ ಹಾಗೆ ‘ಅಯ್ಯೋ.... ಅಯ್ಯೊ....’ ಎನ್ನುವವರೆಗೆ ಪೋಲೀಸರಿಂದ ಚಚ್ಚಿಸಿಕೊಂಡರೂ ಇದೆಲ್ಲಾ ರೈತರಿಗಾಗಿ ಎಂದು ಮೈಯೊರೆಸಿಕೊಳ್ಳುತ್ತಾ ರೈತ ಮುಂದಾಳಾಗಿ ರೈತರ ಸಮಸ್ಯೆ ಬಿಡಿಸುವುದರಲ್ಲಿ ತಮ್ಮ ನೋವನ್ನು ಕಡೆಗಾಣಿಸಿದ್ದು ರೈತರು ಮರೆಯಲಾಗದ ಸಂಗತಿ.

ನೆಲ ಅಪ್ಪವಪ್ಪ ಬಡಿಸಿಕೊಂಡದ್ದು ಒಂದು ದುರಂತವಾದರೆ, ಬಡಿಸಿಕೊಂಡಷ್ಟೂ ಬಡಿದ ಸರಕಾರವನ್ನೇ (ಜನತಾ ಪಕ್ಷ) ಅಪ್ಪಿಕೊಂಡದ್ದು ಮತ್ತೊಂದು ದುರಂತ. ಅಪ್ಪಿಕೊಂಡಷ್ಟೇ ಪಟ್ಟು ಬಿಡದೆ ಅಧ್ಯಕ್ಷರಾದದ್ದು ಒಂದು ದುಸ್ಸಾಹಸ. ಆದರೆ ಗುರಿ ತಲುಪಿದ ಹೆಗ್ಗಳಿಕೆ.

ಸರ್ಕಾರಿ ಲೆಖ್ಖದಲ್ಲಿ ದೊಡ್ಡ ಜಮೀನುದಾರರಾಗಿದ್ದು ಸಮಸ್ಯೆಗಳ ಮೇಲೆ ಸಮಸ್ಯೆಗಳನ್ನ ಎದುರಿಸುತ್ತಾ ಇಂದಿಗೂ ಚಿಂತೆಯ ಹುಳುವಾಗಿ ಒದ್ದಾಡುತ್ತಿರುವುದನ್ನು ಹತ್ತಿರದಿಂದ ರೈತರಾಗಿ ನೋಡಿದವರಿಗೆ ನೋವಿನ ವಿಚಾರ.


ಮಂಡಲದ ಉದ್ಧಾರಕ್ಕೂ ತಮ್ಮ ಭಾರ ಹೊತ್ತು ನಡೆದಾಡುವುದು ಎಷ್ಟು ಸಮಸ್ಯೆ (7ನೇ ಪುಟಕ್ಕೆ)

‘ಪ್ರೀತಿ’–ವರದಕ್ಷಿಣೆ–ವಂಚನೆ–ತಡೆಯಾಜ್ಞೆ...

ಪ್ರೀತಿಸಿ, ಮದುವೆ ನಿರ್ಧರಿಸಲಾಗಿದ್ದ ವಧುವನ್ನು, ವರದಕ್ಷಿಣೆಯ ಕಾರಣಕ್ಕೆ ನಿರಾಕರಿಸಿದ ವರನೊಬ್ಬ ಬೇರೆ ಮದುವೆಯ ಏರ್ಪಾಡು ಮಾಡಿದ್ದು ಅದಕ್ಕೆ ಚಿಕ್ಕಮಗಳೂರಿನ ಮುನ್ಸಿಫ್ ನ್ಯಾಯಾಲಯ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಬೆಂಗಳೂರಲ್ಲಿ ರೈಲ್ವೆ ಇಲಾಖೆಯಲ್ಲಿರುವ ಬೇಲೂರು ತಾಲ್ಲೂಕಿನ ಸಿದ್ದೇಗೌಡ ಸಾಣೆಹಳ್ಳಿಯ ಶಾರದಾಳನ್ನು ಪ್ರೀತಿಸಿ, ಮೇ 24ಕ್ಕೆ ಮದುವೆ ನಿಶ್ಚಯವಾಗಿ ಕರೆಯೋಲೆ ಹಂಚಿಯಾಗಿತ್ತು. ಆತ ಕೇಳಿದ್ದ 25 ಸಾವಿರ ರೂ. ವರದಕ್ಷಿಣೆ ಬಗ್ಗೆ ಅಂತಿಮ ತೀರ್ಮಾನವಾಗಿರಲಿಲ್ಲ. ಮದುವೆಯ ದಿನ ವಧುವಿನ ಕಡೆಯವರು ಸಿದ್ಧವಾಗಿದ್ದರು. ಆತ ಗೈರು ಹಾಜರಾದ.

ಮೇ 29ಕ್ಕೆ ಆತ ಹತ್ತಿರದ ದೇವಗೊಂಡನಹಳ್ಳಿಯ ರಂಗಮ್ಮನೊಡನೆ ವಿವಾಹ ನಿರ್ಧರಿಸಿ ಅಲ್ಲಿಯೂ ಕರೆಯೋಲೆ ಹಂಚಿಕೆಯಾಗಿತ್ತು. ಆದರೆ ಸಾಣೆಹಳ್ಳಿ ವಧುವಿನ ಕಡೆಯವರ ಅರ್ಜಿಯನ್ವಯ ತಡೆಯಾಜ್ಞೆ ಜಾರಿಯಾಗಿದೆ. ಸಿದ್ದೇಗೌಡನ ಮೇಲೆ ಮೊಕದ್ದಮೆ ದಾಖಲಾಗಿದೆ. ಆತ ನಾಪತ್ತೆಯಾಗಿ (7ನೇ ಪುಟಕ್ಕೆ)



ಪ್ರಿಯ ಚಿನಾರಿಗಳೇ,

‘ಚಿನಾರಿ ಕೂಟ’ದ ಕಳೆದ ಸಂಚಿಕೆಯಲ್ಲಿ (3–5–87) ಕೊಟ್ಟಿದ್ದ ಜಾಣ ಪ್ರಶ್ನೆಗಳಿಗೆ ಸರಿಯುತ್ತರಗಳು ಇಲ್ಲಿವೆ:

1) ಭೂಮಿಗಿಂತ ಘನವಾದುದು ತಾಯಿ.
2) ಗಾಳಿಗಿಂತ ವೇಗವುಳ್ಳದ್ದು ಮನಸ್ಸು.
3) ದೇಶಾಂತರಕ್ಕೆ ಹೋದವನಿಗೆ ಗೆಳೆಯ ವಿದ್ಯೆ
4) ಎಂಥ ಕಷ್ಟದಲ್ಲೂ ಮನುಷ್ಯನಿಗೆ ಸಹಾಯಕವಾಗುವುದು ಧೈರ್ಯ.
5) ಭಾರತದ ಬೆನ್ನೆಲುಬು ರೈತ.
6) ಪ್ರಪಂಚದಲ್ಲಿಲ್ಲದಿರುವ 3 ವಸ್ತುಗಳು: ಅಂಗೈಗೆ ರೋಮ, ಆಕಾಶಕ್ಕೆ ಏಣಿ, ಸಮುದ್ರಕ್ಕೆ ಸೇತುವೆ.
7) ಮಾನವರಲ್ಲಿ ಒಂದೇ ಜಾತಿ– ‘ಮನುಷ್ಯ ಜಾತಿ’

ಈ ಸ್ಪರ್ಧೆಗೆ 15 ಜನ ಉತ್ತರ ಕಳಿಸಿದ್ದಿರಿ. ಆದರಲ್ಲಿ ಕೆ. ಆರ್. ಅನ್ನಪೂರ್ಣ, ಕೊಪ್ಪ; ಕೆ. ಎನ್. ಅನಿಲ್ ಕುಮಾರ್, ಹರಿಹರಪುರ ಹಾಗೂ ಬಿ. ಎಸ್. ಪುಷ್ಪಲತ, ಜೋಮ್ಲಾಪುರ—ಈ ಮೂವರು 5 ಪ್ರಶ್ನೆಗಳಿಗೆ ಸರಿಯುತ್ತರ ಕಳಿಸಿದ್ದಾರೆ. ಅವರಿಗೆ ಮಕ್ಕಳ ಪುಸ್ತಕಗಳ ಬಹುಮಾನ ಕಳಿಸಲಾಗುವುದು.

ಇಷ್ಟೊಂದು ಜನ ಉತ್ಸಾಹದಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಕ್ಕೆ ನಿಮಗೆಲ್ಲಾ ‘ಭೇಷ್ !’

ಆದರೆ ಯಾರೂ ಡಬ್ಬಲ್ ಬಹುಮಾನ ಹೊಡೆಯಲಿಲ್ಲವಲ್ಲ! ಮತ್ತೆ, ಎಲ್ಲ 15 ಜನರೂ “ಮನುಷ್ಯರಲ್ಲಿ 2 ಜಾತಿ: ಗಂಡು ಮತ್ತು ಹೆಣ್ಣು” ಎಂದು ಬರೆದಿದ್ದೀರಿ. ಈಗ ಉದಾಹರಣೆಗೆ ಪ್ರಾಣಿಗಳಲ್ಲಿ ಎಷ್ಟು ಜಾತಿ? ಎಂದರೆ ನೀವು ಹುಲಿ, ಕರಡಿ, ಹಸು, ಮಂಗ ಮುಂತಾಗಿ ಬೇರೆ ಬೇರೆ ಜಾತಿಗಳ ಪ್ರಾಣಿಗಳನ್ನು ಹೆಸರಿಸಬಹುದು. ಪ್ರತಿಯೊಂದರಲ್ಲೂ ಹೆಣ್ಣು ಜಾತಿ ಮಂಗ, ಗಂಡು ಜಾತಿ ಮಂಗ ಮುಂತಾಗಿ ಪ್ರತ್ಯೇಕವಾಗಿ ಲೆಕ್ಕ ಹಿಡಿಯುತ್ತೀರಾ? ಇಲ್ಲ ಅಲ್ಲವಾ? ಮನುಷ್ಯರಲ್ಲೂ ಹಾಗೇ ತಾನೆ? ಆದ್ದರಿಂದ **ಮಾನವರಲ್ಲಿ ಒಂದೇ ಜಾತಿ, ಅದು ಮನುಷ್ಯ ಜಾತಿ** ಎಂಬುದೇ ಸರಿಯಾದುದು. ಗಂಡು–ಹೆಣ್ಣು ಎಂಬುದು ಲಿಂಗ ಭೇದ ಮಾತ್ರ.

ನೋಡಿ ಮತ್ತೆ. ನೀವು ಹೆಚ್ಚೆಚ್ಚು ಜನ ಕೂಟದಲ್ಲಿ ಭಾಗವಹಿಸತೊಡಗಿದರೆ ನಮಗೇ ಕಷ್ಟ. 15 ದಿನಕ್ಕೊಮ್ಮೆ ಅಂಕಣ ಪ್ರಕಟಿಸಬೇಕಾದೀತು !

ನಿಮ್ಮ ಪ್ರೀತಿಯ,
ಸಂಪಾದಕ.

ಹೊಸ ಪ್ರಶ್ನೆಗಳು

1. ಯಾವುದನ್ನು ಅಪಹರಿಸಿದರೂ ಒಂದನ್ನು ಅಪಹರಿಸಲಾಗದು. ಏನದು?
2. ಕಣ್ಣಿದ್ದೂ ಕುರುಡರು ಯಾರು?
(ಪ್ರಶ್ನೆ ಕಳಿಸಿದ್ದು: ಎಂ. ಕೆ. ಶ್ರೀಕಂಠ, ಮೇಲುಮಕಲಿ)
3. ಯಾವ ವಸ್ತು ಒಡೆದ ನಂತರವೇ ಹೆಚ್ಚು ಉಪಯೋಗಕ್ಕೆ ಬರುವುದು?
4. ಒಬ್ಬರಿಗೆ ಅತಿ, ಇಬ್ಬರಿಗೆ ಹದ, ಮೂವರಿಗೆ ಹಂಚಿದರೆ ಯಾವ ಬೆಲೆಯೂ ಇಲ್ಲ. ಏನದು?
5. Aಯು Bಯ ತಂದೆ, ಆದರೆ Bಯು Aಯ ಮಗನಲ್ಲ. ಹಾಗಾದರೆ B ಯಾರು?

ಉತ್ತರಗಳು 20 6.87ರೊಳಗೆ ತಲುಪಬೇಕು.

ದುಡಿಮೆಯ ಬೆಲೆ

ಒಂದೂರಿನಲ್ಲಿ ಕಾಳಯ್ಯ, ತಿಪ್ಪಮ್ಮ ಎಂಬ ಮುದುಕರಿದ್ದರು. ಅವರಿಗೆ ಸಿದ್ಧ ಎಂಬ ಮಗನಿದ್ದ. ಅವನು ತುಂಬಾ ಸೋಮಾರಿಯಾಗಿದ್ದ. ಅಜ್ಜ, ಅಜ್ಜಿ “ಹೋಗೋ ಸಿದ್ಧ, ದುಡಿದು ಸಂಪಾದನೆ ಮಾಡೋ” ಎಂದರೆ ಸಿದ್ಧ “ನನಗಾಗೋಲ್ಲ. ನನಗೆ ನಿದ್ರೆ ಬರುತ್ತಿದೆ” ಎಂದು ಕಂಬಳಿ ಹೊದೆದು ಮಲಗಿ ಬಿಡುತ್ತಿದ್ದ. ಅಜ್ಜ, ಅಜ್ಜಿ ಮಗನ ನಡತೆಯಿಂದ ಬೇಸರಗೊಂಡು, ಅವನಿಗೆ ಬುದ್ಧಿ ಕಲಿಸಬೇಕೆಂದು ನಿಶ್ಚಯಿಸಿದರು.

ಮರುದಿನ ಅಜ್ಜ, ಅಜ್ಜಿಯ ಹತ್ತಿರ “ಇನ್ನು ಮುಂದೆ ಸಿದ್ಧನಿಗೆ ನೀನು ಊಟ ಹಾಕಬೇಡ, ಅವನು ದುಡಿದು ತಂದರೆ ಮಾತ್ರ ಊಟ ಹಾಕು” ಎಂದು ಕಟ್ಟಪ್ಪಣೆ ಮಾಡಿದನು. ಅಂದು ಸಿದ್ಧನು ಸ್ನೇಹಿತರ ಮನೆಯಿಂದ ಬಂದವನೇ ತಟ್ಟೆ ಇಟ್ಟುಕೊಂಡು “ಅಮ್ಮಾ, ಬಹಳ ಹಸಿವು. ಊಟ ಇಕ್ಕು” ಎಂದನು. ಆಗ ಅಜ್ಜಿ “ಸಿದ್ಧಾ, ಇಂದು ಹಿಟ್ಟು ಇಲ್ಲವಾಗಿದೆ. ಹಾಗಾಗಿ ನಾನು ರೊಟ್ಟಿ ಮಾಡಲಿಲ್ಲ. ನಿನಗೇನು ಇಕ್ಕಲಪ್ಪಾ?” ಎಂದಳು. ಆಗ ಸಿದ್ಧ ಸಿಟ್ಟಿನಿಂದ ತಟ್ಟೆಯನ್ನು ಬೀಸಿ ಒಗೆದು ಧಡಧಡನೆಂದು ಹೊರಗೆ ಬಂದನು.

ಸೀದಾ ಸ್ನೇಹಿತರ ಮನೆಗೆ ಹೋದನು. ಆಗ ಸ್ನೇಹಿತರ ಮನೆಯಲ್ಲಿ ಊಟದ ಸಮಯ. ಎಲ್ಲರೂ ಊಟಕ್ಕೆ ಕುಳಿತಿದ್ದರು. ಸಿದ್ಧ ಬಂದುದನ್ನು ನೋಡಿ ಇವನಿಗೂ ಊಟಕ್ಕಿಕ್ಕಿದರು. ಇವನು ಗಡದ್ದಾಗಿ ಊಟ ಮಾಡಿ ಮನೆಗೆ ಬಂದು ಮಲಗಿದನು. ಹೀಗೆ ಮೂರು ದಿವಸ ನಡೆಯಿತು.

ಒಂದು ದಿನ ಇವನು ಸ್ನೇಹಿತರ ಮನೆಗೆ ಹೋದಾಗ ಯಾರೂ ಇವನಿಗೆ ಊಟಕ್ಕಿಕ್ಕಲಿಲ್ಲ. ಇವನು ಅವರ ಮನೆಯಿಂದ ಹೊರಟಾಗ ಹೊಟ್ಟೆ ಹಸಿವಿನಿಂದ ಚುರುಗುಟ್ಟುತ್ತಿತ್ತು. ಮನೆಗೆ ಹೋಗೋಣ ಎಂದರೆ ಮನೆಯಲ್ಲಿ ಹಿಟ್ಟಿಲ್ಲ. ಸ್ನೇಹಿತರ ಮನೆಯಲ್ಲಿ ಊಟ ಹಾಕುವುದಿಲ್ಲ. ಏನು ಮಾಡುವುದು? ಎಂದು ಯೋಚಿಸಿದನು. ಹಸಿವು ಕೆಲಸ ಮಾಡುವಂತೆ ಪ್ರೇರೇಪಿಸಿತು.

ಕೂಡಲೇ ಒಬ್ಬರ ಮನೆಗೆ ಹೋಗಿ “ನನಗೆ ಏನಾದರೂ ಕೆಲಸ ಕೊಡಿ” ಎಂದ. ಅವರು, “ಏನು? ನಿನ್ನಂಥವನಿಗೆ ಕೆಲಸ ಕೊಡುವುದೆ? ನೀನೋ ಮೊದಲೇ ಸೋಮಾರಿ. ನಿನಗೆ ಕೆಲಸ ಕೊಟ್ಟರೆ ನಾವು ದಿವಾಳಿಯಾಗುತ್ತೇವೆ” ಎಂದರು

ಆಗ ಸಿದ್ಧನಿಗೆ ಅವಮಾನವಾಯಿತು. ಜೊತೆಗೆ ನಾಚಿಕೆಯೂ ಪಶ್ಚಾತ್ತಾಪವೂ ಆಯಿತು. ಅವನು, “ಇಲ್ಲ ಸ್ವಾಮಿ. ನಾನು ಸರಿಯಾಗಿ ಕೆಲಸ ಮಾಡುತ್ತೇನೆ” ಎಂದು ಪರಿ ಪರಿಯಿಂದ ಹೇಳಿದನು. ಅವರು ಅನುಮಾನದಿಂದಲೇ ಕೆಲಸ ಕೊಟ್ಟರು. ಅವನಿಗೆ ಆ ದಿನ ಕೆಲಸ ಮಾಡಿದ್ದಕ್ಕೆ ಒಂದು ಸೇರು ಅಕ್ಕಿ ದೊರಕಿತು. ಅದನ್ನು ತೆಗೆದುಕೊಂಡು ಮನೆಗೆ ಬಂದನು. ಆಗ ಅಜ್ಜ, ಅಜ್ಜಿ, ಮಗ ಬುದ್ಧಿ ಕಲಿತನಲ್ಲ ಎಂಬ ಸಂತಸದಿಂದ ಸಿದ್ಧನನ್ನು ಸ್ವಾಗತಿಸಿದರು. ಅಜ್ಜಿ “ಮಗನೆ, ಬೆಳಗಿನಿಂದ ಏನೂ ತಿಂದಿಲ್ಲ ಎಷ್ಟು ಹಸಿವಾಗಿದೆಯೋ” ಎಂದು ತಟ್ಟೆಯಿಟ್ಟು ರೊಟ್ಟಿ ಹಾಕಿದಳು.

ಅಂದಿನಿಂದ ಸಿದ್ಧ ಸೋಮಾರಿತನ ಬಿಟ್ಟು, ಚೆನ್ನಾಗಿ ದುಡಿದು ತಂದೆ–ತಾಯಿಗಳನ್ನು ಸಾಕಿಕೊಂಡಿದ್ದನು.

● ಸಿ. ಎಸ್. ಪಲ್ಲವಿ
ಉತ್ತಮೇಶ್ವರ

ಹೆತ್ತ ಮಕ್ಕಳಿಗೆ ತಂದೆಯ ಮನೆಯಿಂದಲೇ ಬಹಿಷ್ಕಾರ; ವೃದ್ಧ ತಂದೆ-ತಾಯಿಗಳಿಗೆ ಬಲಾತ್ಕಾರದ ಪ್ರಾಯಶ್ಚಿತ್ತ !

ಶೃಂಗೇರಿ ತಾಲ್ಲೂಕಿನ ಶಿವಳ್ಳಿ ಬ್ರಾಹ್ಮಣ ಮುಖಂಡರ 'ಕಲ್ಯಾಣ' ಕಾರ್ಯಕ್ರಮಗಳು ?!

ಪ್ರಿಯ ಓದುಗರೆ,

ಹರಿಹರಪುರ ಗುರುಗಳನ್ನು ಮುಂದಿಟ್ಟುಕೊಂಡು, ಅವರ ಶಿಷ್ಯ ಮಂಡಳಿಯ ಮುಖಂಡರೆನ್ನಿಸಿಕೊಂಡವರು ನಮ್ಮ ಮುದಿ ತಂದೆ-ತಾಯಿಗಳ ಮೇಲೆ ನಡೆಸಿರುವ ಧಾರ್ಮಿಕ ದೌರ್ಜನ್ಯದ ವಿವರಗಳನ್ನು ನಿಮ್ಮ ಮುಂದಿಟ್ಟಿದ್ದೇನೆ. ಇದರಲ್ಲಿ ಸುಳ್ಳಿಲ್ಲ, ಉತ್ಪ್ರೇಕ್ಷೆಯಿಲ್ಲ, ನಾನು ಗೆಲ್ಲಲೇಬೇಕಾದ ಯಾವ ಪಣವೂ ಇಲ್ಲ.

ಆವೇಶಗೊಳ್ಳದೆ ದಯವಿಟ್ಟು ಸಾವಧಾನದಿಂದ ಓದಿ, ಚಿಂತಿಸಿ, ನಿಮ್ಮ ಪ್ರಾಮಾಣಿಕ ಪ್ರತಿಕ್ರಿಯೆಗಳನ್ನು ಪ್ರಕಟಣೆಗಾಗಿ ಕಳಿಸಿಕೊಡಿ. ನೆನಪಿಡಿ: ಪ್ರತಿಕ್ರಿಯೆಯಲ್ಲೂ ಆವೇಶ ಬೇಡ.

—ಸಿರಿಮನೆ ನಾಗರಾಜ್.

ಒಂದು ಭೋಜನ ಕೂಟ. ಬ್ರಾಹ್ಮಣರ ಹೊರತು ಬೇರೆಯವರಿಗೆ ಆಹ್ವಾನವಿಲ್ಲದ ಸಂತರ್ಪಣೆ ಅದು. ಆ ಸಂತರ್ಪಣೆ ನಡೆಸಿದ ವೃದ್ಧ ಗೃಹಸ್ಥನ ಮಗಳು–ಅಳಿಯನನ್ನೂ, ಮಗ–ಸೊಸೆಯನ್ನೂ ಜಾತಿಯಿಂದ ಹೊರಗಿಟ್ಟು, ಅವರಿಂದಾಗಿ 'ಜಾತಿಗೆಟ್ಟು ಹೋಗಿದ್ದ' ಈ ಅಪ್ಪ-ಅಮ್ಮರನ್ನು ಪುನಃ ಜಾತಿಗೆ ಸೇರಿಸಿಕೊಂಡ ಸಂತೋಷಕ್ಕಾಗಿ ನಡೆದ ಸಂತರ್ಪಣೆ ಅದು. ಅದಕ್ಕೆ 2 ದಿನ ಮುಂಚೆ ಆ ಮನೆಯನ್ನು 'ಶುದ್ಧೀಕರಿಸಿ' ಪುಣ್ಯಾಹ ಮಾಡಿ, ಆ ಮುದಿ ತಂದೆ–ತಾಯಿಗಳಿಗೆ ಪ್ರಾಯಶ್ಚಿತ್ತ ಮಾಡಿಸಿ ಪಂಚಗವ್ಯ ಕುಡಿಸಿ, ಜಾತಿಗೆ ಸೇರಿಸಿಕೊಂಡು, ಪುನಃ ಇದೇ ರೀತಿ ಜಾತಿ ತೊರೆಯದಂತೆ ಕಟ್ಟುಪಾಡು ಮಾಡಲಾಗಿತ್ತು. ಜಾತಿ ಕಳೆದುಕೊಂಡ ಮಗ–ಮಗಳನ್ನು ಪುನಃ ಮನೆಗೆ ಸೇರಿಸಿಕೊಳ್ಳಕೂಡದು, ಅವರ ಜೊತೆ ಯಾವ ಬಂಧುಗಳೂ ಯಾವ ಸಂದರ್ಭದಲ್ಲೂ, ಯಾವ ಕಾರಣಕ್ಕೂ ಪರೋಕ್ಷವಾಗಿ ಕೂಡ ಸಂಪರ್ಕ ಇಟ್ಟುಕೊಳ್ಳಕೂಡದು, ಎಂಬುದೇ ಈ ಕಟ್ಟುಪಾಡು.

ಆದರೆ ಆ ಗೃಹಸ್ಥನ ಇಬ್ಬರು ಹಿರಿಯ ಮಕ್ಕಳ ಹೊರತು ಮತ್ತೆಲ್ಲ ಐವರು ಮಕ್ಕಳೂ ತಮ್ಮ ಅಣ್ಣ ಮತ್ತು ತಂಗಿಯನ್ನು ಬಹಿಷ್ಕರಿಸುವುದನ್ನು ಒಪ್ಪಿರಲಿಲ್ಲ. ಮನೆಯಲ್ಲಿದ್ದ ಇಬ್ಬರು ಮಕ್ಕಳ ಪೈಕಿ ಕಿರಿಯವನು, "ನಾನು ನಾಶವಾದರೂ ಸರಿಯೆ, ಅವರಿಬ್ಬರನ್ನೂ ಅವರ ಬಳಗವನ್ನೂ ಮನೆಗೆ ಸೇರಿಸದೆ ಇರಲಾರೆ" ಎಂದು ಹಟ ತೊಟ್ಟು, ಕೊಡಿಗೆ ಎಂಬ ಕಾಡು ಕೊಂಪೆಯಲ್ಲಿ ತನ್ನ ಹಿಸ್ಸೆಗೆ ಬಂದಿದ್ದ ಪಾಳು ಜಮೀನಿನಲ್ಲಿದ್ದ ಗುಡಿಸಲಿನಲ್ಲಿ ಬಿಡಾರ ಹೂಡಿಕೊಂಡಿದ್ದ. ಈ ಸಂತರ್ಪಣೆಗೆ ಬರುವಂತೆ ಆತನಿಗೂ ಹೇಳಿದ 'ಶಾಸ್ತ್ರ' ಮಾಡಿ ಮುಗಿಸಲಾಗಿತ್ತಾದರೂ ತನ್ನ ಮನಃಸಾಕ್ಷಿಯನ್ನು ಮೀರಲಾರದ ಆತ ಸಂತರ್ಪಣೆಯಲ್ಲಿ ಭಾಗವಹಿಸಲಿಲ್ಲ. ಇನ್ನೊಬ್ಬ ಮಾತ್ರ ಮನೆಯಲ್ಲೇ ಇದ್ದವನಾದ್ದರಿಂದ ಈ ಸಿಕ್ಕಿನೊಳಗೆ ಸಿಕ್ಕು ಬಿದ್ದಿದ್ದ.

ಸಂತರ್ಪಣೆ ಉಂಡ ಜನ ಅದರ ಬಗೆಗೂ, ತಮ್ಮ ಶ್ರೇಷ್ಠ ಜಾತಿಯ ಮೇಲ್ಮೆ ಮತ್ತೊಮ್ಮೆ ಸಾಬೀತಾದ ಬಗೆಗೂ ತೃಪ್ತಿಗೊಂಡು ತೇಗಿ ಬೀಗುತ್ತಿದ್ದರೆ, ಒಳಗೆ ಎರಡು ಹೃದಯಗಳು ಮಾತ್ರ ಅಳುತ್ತಿದ್ದವು. ಒಂದರದು ಭೀಕರ ಅಲೆಗಳಿದ್ದ ಸಮುದ್ರದ ಮೊರೆತದಂಥ ರೋದನ. ಇನ್ನೊಂದರದು ಸ್ಮಶಾನ ಮೌನ ಮುಸುಕಿದಂಥ ಗಾಢವಾದ ಮೂಕ ರೋದನ. ಈ ಹೃದಯಗಳಿಗೆ ತಮ್ಮ ಅಳು ಪ್ರಕಟಿಸಲು ಕಣ್ಣು ಬಾಯಿಗಳಿರಲಿಲ್ಲ. ಹೃದಯಗಳನ್ನು ಕಾಣಲಾರದ ಜಾತಿ ಶ್ರೇಷ್ಠರಿಗೆ ಈ ರೋದನದ ಪರಿವೆಯಿರಲಿಲ್ಲ.

ಈ ಸಂತರ್ಪಣೆ ನಡೆದದ್ದು ಸಿರಿಮನೆಯಲ್ಲಿ, ಅಂದರೆ ನಮ್ಮ ಹೆತ್ತವರ ಮನೆಯಲ್ಲಿ. 29–5–87ರ ಶುಕ್ರವಾರ.

ಈ ಘಟನಾವಳಿಗಳು ನಮ್ಮ ಒಬ್ಬರ ಮನೆಯಲ್ಲಿ ನಡೆದಂಥವಾದರೂ, ಅದಕ್ಕೆ ಕಾರಣವಾದ ವಿಚಾರಗಳು ಮತ್ತು ಸನ್ನಿವೇಶಗಳು ಒಂದು ಮನೆಗಲ್ಲ, ಒಂದು ಜಾತಿಗಲ್ಲ, ನಮ್ಮ ಇಡೀ ಸಮಾಜದ ಬೇಕು–ಬೇಡಗಳಿಗೆ, ಆಗು– ಹೋಗುಗಳಿಗೆ ಮತ್ತು ಅಳಿವು–ಉಳಿವಿನ ಪ್ರಶ್ನೆಗೆ ಸಂಬಂಧಿಸಿದವೆನಿಸಿರುವುದರಿಂದ ಅವುಗಳನ್ನು ಪರಾಮರ್ಶೆಗಾಗಿ ಆದಷ್ಟು ಸಂಕ್ಷಿಪ್ತವಾಗಿ ನಿಮ್ಮ ಮುಂದಿಡುತ್ತೇನೆ.

ಇದು ಇಡೀ ಸಮಾಜಕ್ಕೆ ಸಂಬಂಧಿಸಿದ ವಿಚಾರವೆನ್ನುವುದಕ್ಕೆ ಪುರಾವೆ: ನಮ್ಮನ್ನು ಬಹಿಷ್ಕರಿಸಿದ್ದು ನಮ್ಮ ಮನೆಯವರಲ್ಲ, ಬ್ರಾಹ್ಮಣ ಸಮಾಜದ ಮುಖಂಡರು. ನಮ್ಮ ಹೆತ್ತವರು ತಾವಾಗಿ ಜಾತಿಯೊಳಗೆ ಸೇರಿಸಿಕೊಳ್ಳಲು ಬೇಡಿಕೊಂಡಿದ್ದಲ್ಲ; ಬ್ರಾಹ್ಮಣ ಸಮಾಜದ ಮುಖಂಡರೇ ಹೇಳುವಂತೆ, ಅವರುಗಳು ನಮ್ಮ ತಂದೆಗೆ "ಮೂಗು ಒತ್ತಿ ಬಾಯಿ ಕಳಿಸಿ ಜಾತಿಗೆ ಸೇರಿಸಿಕೊಂಡಿದ್ದು."

* * *

ಡಿಸೆಂಬರ್ 7 ರಂದು ನಮ್ಮ ತಂಗಿ ಸುನಂದ ಮತ್ತು ಕುದುರೆಮುಖ ಯೋಜನೆಯ ಮಂಗಳೂರು ಕಾರ್ಖಾನೆಯಲ್ಲಿ ಉದ್ಯೋಗಿಯಾಗಿರುವ ಡಿ. ಸಿದ್ದುಸ್ವಾಮಿ ಸುಮಾರು 250 ಮಂದಿ ಬಂಧು–ಮಿತ್ರರೆದುರು ಸರಳ ರೀತಿಯಲ್ಲಿ ವಿವಾಹವಾದವರು. ಹೋಮ, ಪೌರೋಹಿತ್ಯ, ವಾಲಗ, ಜಗಳ, ವರದಕ್ಷಿಣೆ–ವರೋಪಚಾರಗಳ ಗೊಡವೆಯಿಲ್ಲ. ಹಾರ ವಿನಿಮಯ ಮತ್ತು ದಾಂಪತ್ಯ ಜೀವನದ ಜವಾಬ್ದಾರಿಯನ್ನು ನಿಷ್ಠರಾಗಿ ನಿರ್ವಹಿಸುವ ಪ್ರಮಾಣ ವಚನ ಸ್ವೀಕಾರ ಮಾತ್ರ.

ಭಾಗವಹಿಸಿದ್ದ ಕೆಲ ಮಂದಿ ವಿಚಾರವಂತ ಹಿರಿಯರಿಂದ ಸರಳ, ಜಾತ್ಯತೀತ ವಿವಾಹಗಳ ಪ್ರಯೋಜನ ಹಾಗೂ ವೈವಾಹಿಕ ಜೀವನದಲ್ಲಿ ಇರಬೇಕಾದ ಹೊಂದಾಣಿಕೆ, ಪ್ರೀತಿ. ನಂಬಿಕೆಗಳನ್ನು ಕುರಿತಂತೆ ಹಿತವಚನ ಹಾಗೂ ಶುಭಹಾರೈಕೆ, ಕೊನೆಯಲ್ಲಿ ಸಿಹಿ ಹಂಚಿಕೆ—ಇಷ್ಟೇ ಕಾರ್ಯಕ್ರಮ.

ಅನಂತರ ದೂರದಿಂದ ಬಂದಿದ್ದ ಕೆಲವೇ ಮಂದಿ ಬಂಧುಗಳು ಮತ್ತು ಸ್ನೇಹಿತರಿಗೆ ನನ್ನ ಮನೆಯಲ್ಲಿ ಊಟ. ಈ ಇಡೀ ಕಾರ್ಯಕ್ರಮದಲ್ಲಿ ಶೃಂಗೇರಿ, ಕೊಪ್ಪ, ಚಿಕ್ಕಮಗಳೂರಿನ ದಲಿತ ಸಂಘರ್ಷ ಸಮಿತಿಗಳ ಗೆಳೆಯರೂ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ವರ ಸಿದ್ದುಸ್ವಾಮಿ ನಮ್ಮ ಸಮಾಜ ಅಸ್ಪೃಶ್ಯವೆಂದು ದೂರವಿಟ್ಟಿರುವ ಜಾತಿಯಲ್ಲಿ ಹುಟ್ಟಿದವರು. ಆದರೆ ಎಲ್ಲ ಪ್ರತಿಕೂಲ ಪರಿಸ್ಥಿತಿಗಳೆದುರು ಕೇವಲ ಸ್ವಸಾಮರ್ಥ್ಯ ಮತ್ತು ತೀವ್ರ ಪರಿಶ್ರಮದಿಂದ ಉತ್ತಮ ಮಟ್ಟದ ತಾಂತ್ರಿಕ ವಿದ್ಯಾಭ್ಯಾಸ ಪಡೆದು ಒಳ್ಳೆಯ ಕೆಲಸ ದೊರಕಿಸಿಕೊಂಡವರು. ಸುಸಂಸ್ಕೃತ, ಸ್ಫುರದ್ರೂಪಿ. ಯಾವ ದುರಭ್ಯಾಸಗಳೂ ಇಲ್ಲದೆ, ಯಾವುದೇ ವಧು ಹಾರೈಸಬಹುದಾದಂಥ ಗುಣವಂತ.

ನಮ್ಮ ತಂಗಿಯಾದರೂ ಆರನೇ ತರಗತಿಗೇ ಶಾಲೆ ಬಿಟ್ಟು ಹಳ್ಳಿ ಸೇರಿ, ತೋಟ–ಗದ್ದೆ–ಮನೆ–ಕೊಟ್ಟಿಗೆ ಎಂದುಕೊಂಡು ಕಷ್ಟ ಪಟ್ಟು ದುಡಿಯುತ್ತಲೂ, ಮನೆಯಲ್ಲಿನ ಪ್ರೀತಿಪೂರ್ಣ, ವಿಚಾರವಂತ ಪರಿಸರದಿಂದಾಗಿ ಸುಸಂಸ್ಕೃತಳಾಗಿ ರೂಪುಗೊಂಡವಳು. ಏಳಿಗೆ ಬಯಸುವ ಯಾವುದೇ ಮನೆತನ ಅಪೇಕ್ಷೆ ಪಡಬಹುದಾದ ಗುಣವಂತೆ, ಸಾಕಷ್ಟು ರೂಪವಂತೆ. ಹಾಗೆಯೇ ಎಂಥ ಕಷ್ಟವನ್ನೂ ಹೊಂದಾಣಿಕೆಯಿಂದ ಎದುರಿಸಬಲ್ಲೆನೆಂಬ ಆತ್ಮವಿಶ್ವಾಸವಿದ್ದವಳು.

ಈ ಸಂಬಂಧ ನಮಗೆ ದೊರಕಿದ್ದು ಆಕಸ್ಮಿಕವಾಗಿಯೇ. ಈ ಹುಡುಗಿ ಹೆಚ್ಚು ಓದಿಲ್ಲದೆ, ಹಳ್ಳಿಯಲ್ಲೇ ಇದ್ದವಳಾದ್ದರಿಂದ ಅಂತರ್ಜಾತಿ ವಿವಾಹವೆಲ್ಲ ಬಹಳ ತೀವ್ರವಾದ ಸಮಸ್ಯೆಯಾಗುತ್ತದೆ; ಪೇಟೆಯಲ್ಲಾದರೆ ಪರವಾಗಿರಲಿಲ್ಲ. ಎಂದುಕೊಂಡು, ನಾವು ಸುತ್ತಮುತ್ತ ಬ್ರಾಹ್ಮಣರಲ್ಲೇ ವರಾನ್ವೇಷಣೆಗೆ ಪ್ರಯತ್ನಿಸಿದ್ದೆವು. ಆದರೆ ವರದಕ್ಷಿಣೆ ಕೊಡುವುದು ನಮಗೆ ಒಪ್ಪಿಗೆಯಿರಲಿಲ್ಲ. ಸ್ವಲ್ಪ ಪರವಾಗಿಲ್ಲ ಎಂಬಂಥವರು ಸಿಕ್ಕರೆ ಅವರ ಹಣದಾಹ ನಮ್ಮನ್ನು ದೂರವಿಡುತ್ತಿತ್ತು. ಹೀಗಾಗಿ ವರಾನ್ವೇಷಣೆ ಸುಲಭದ ಮಾತಾಗಿರಲಿಲ್ಲ.

ಹೀಗೇ ಪ್ರಯತ್ನಿಸುತ್ತ, ಇನ್ನೇನು ಯಶಸ್ವಿಯಾದೆವೆನ್ನುವಾಗ ನಾವು ನೋಡಿ ಆಗಬಹುದೆಂದುಕೊಂಡ ಸಂಬಂಧಗಳನ್ನು 'ಕಾಣದ ಕೈ'ಯೊಂದು ಉದ್ದೇಶ ಪೂರ್ವಕ ತಪ್ಪಿಸುತ್ತಿರುವುದು ನಮ್ಮ ಗಮನಕ್ಕೆ ಬಂತು. ಹೀಗೆ 2-3 ಸಂಬಂಧಗಳು ಯಾವುದೇ ಕಾರಣವಿಲ್ಲದೆ ತಪ್ಪಿಹೋದವು.

ನಮ್ಮ ತಂಗಿಯ ಬಗ್ಗೆ, "ಅವಳು ದೇವರು–ದಿಂಡರು ಇಲ್ಲದವಳು; ಮೀನು–ಮಾಂಸ ತಿನ್ನುವವಳು, ಅದಕ್ಕಾಗಿ ಯಾವಾಗಲೂ ಕೊಪ್ಪದ ಅಣ್ಣನ ಮನೆಯಲ್ಲಿರುತ್ತಾಳೆ; ಭಾರಿ ಜೋರು, ಒಬ್ಬೊಬ್ಬಳೇ ಮೈಸೂರು–ಬೆಂಗಳೂರು ಎಲ್ಲ ಸುತ್ತುತ್ತಾಳೆ" ಮುಂತಾಗಿ ಬಹಳ ಸುಸಜ್ಜಿತವಾದ ಪ್ರಚಾರ ನಡೆಸಿರುವುದು ಕಂಡು ಬಂತು. ನಮ್ಮ ಚಿಕ್ಕಪ್ಪಂದಿರ ಹೆಣ್ಣು ಮಕ್ಕಳಿಗೆ ಗಂಡು ಕೇಳಲು ಹೋದಲ್ಲೆಲ್ಲಾ, "ಸಿರಿಮನೆಯವರಾ ? ಹಾಗಾದರೆ ಬೇಡ" ಎನ್ನುತ್ತಿದ್ದಾರಂತೆ ಎಂಬ ಪ್ರಚಾರವೂ ನಡೆಯಿತು. (ವಾಸ್ತವವಾಗಿ ಹಾಗೆ ಎಲ್ಲೂ ಆಗಿಲ್ಲ. ಆದರೆ ಈ ಪ್ರಚಾರದ ಗುಲ್ಲು ಕೇಳಿಯೇ ನಮ್ಮ ಬಳಗದ ಕೆಲವರು ನಮ್ಮನ್ನು ದ್ವೇಷಿಸುವಂತಾಗಲಿ ಎಂಬುದು ಈ ಪ್ರಯತ್ನದ ಹಿಂದಿದ್ದ ಉದ್ದೇಶಗಳಲ್ಲೊಂದು.)

ಕಳೆದ ವರ್ಷ ಕಿಗ್ಗ ದೇವಸ್ಥಾನದ ಸಹಪಂಕ್ತಿ ಭೋಜನದ ಬಗ್ಗೆ ನಮ್ಮ ಪತ್ರಿಕೆಯಲ್ಲಿ ಸುದೀರ್ಘ ಚರ್ಚೆಗಳು ನಡೆದ ನಂತರ ಈ ಬೆಳವಣಿಗೆ ಕಂಡುಬಂದದ್ದು. ಆದ್ದರಿಂದ, ಸಾಮರಸ್ಯ, ಸಹಬಾಳ್ವೆಗಳಂಥ ಉದಾತ್ತ ವಿಚಾರಗಳ ಬದಲು ಜಾತಿ ಭೇದ, ಜಾತಿ–ಶ್ರೇಷ್ಠತೆಗಳನ್ನೇ (ಹಿಟ್ಲರನಂತೆ) ತೀವ್ರವಾಗಿ ಪ್ರತಿಪಾದಿಸುವ, ಆ ಮೂಲಕ ತನ್ನ ಹಿತಾಸಕ್ತಿಯನ್ನು ಭದ್ರವಾಗಿಟ್ಟುಕೊಳ್ಳಲು ಯೋಚಿಸುವ ಶಕ್ತಿಯೇ ಹೀಗೆ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿರುವುದೆಂಬುದನ್ನು ತಿಳಿಯಲು ಕಷ್ಟ ಪಡಬೇಕಾಗಿರಲಿಲ್ಲ. ನಮ್ಮ ಪತ್ರಿಕೆಯ ಬಾಯನ್ನು ಮುಚ್ಚಿಸಲು ಹಾಗೂ ನಮ್ಮ ಆಲೋಚನೆಯ ಕ್ರಮವನ್ನು ನಿಯಂತ್ರಿಸಲು ಇದೊಂದು 'ಬ್ಲಾಕ್ ಮೇಲ್' ತಂತ್ರ ಎಂಬುದು ನಮಗೆ ಸ್ಪಷ್ಟವಾಗಿತ್ತು.

ಹೀಗಾಗಿ, ಮೊದಲೇ ಜಾತೀಯತೆಯ ಸಂಕುಚಿತ ದೃಷ್ಟಿಕೋಣವನ್ನು ಮೀರಿ ಯೋಚಿಸುವ ಅಭ್ಯಾಸವಾಗಿದ್ದ ನಮಗೆ ಈಗ ಅಂತರ್ಜಾತಿ ವಿವಾಹದ ಯೋಚನೆ ಬಾರದೆ ಇರಲಿಲ್ಲ. ನಮ್ಮ ಹುಡುಗಿಗೆ ಕೂಡ ಈ ಜಾತಿಯ ಬಗ್ಗೆ ಜಿಗುಪ್ಸೆ ಬಂದು, ಯಾವ ಜಾತಿಯವನಾದರೂ ಸರಿ, ಯೋಗ್ಯ ವರ ಸಿಕ್ಕರೆ ಮದುವೆಯಾದೇನು ಎನಿಸಿತ್ತು.

[ಹೆಣ್ಣು ಮಕ್ಕಳ ಮದುವೆಯ ಕರಾಳ ಸಮಸ್ಯೆಯ ಅರಿವಿದ್ದುದರಿಂದ ಅದರ ಬಿಸಿಯನ್ನು ಸ್ವಲ್ಪವಾದರೂ ತಪ್ಪಿಸಿಕೊಳ್ಳಲಿಕ್ಕಾಗಿ ನಮ್ಮ ಇನ್ನೊಬ್ಬ ತಂಗಿಯನ್ನು ಓದಿಸಿದ್ದು, ಆಕೆ ಈಗ ಕೆಲಸದಲ್ಲಿದ್ದಾಳೆ. ಸುನಂದನಿಗೂ ಸಹ, ಅಗತ್ಯಕ್ಕೆ ಬೇಕಾದೀತೆಂದು ಹಾಗೂ ಮದುವೆಯ ಸಂತೆಯಲ್ಲಿ

(4ನೇ ಪುಟಕ್ಕೆ)

ಬಹಿಷ್ಕಾರ, ಪ್ರಾಯಶ್ಚಿತ್ತ ಇತ್ಯಾದಿ 'ಕಲ್ಯಾಣ' ಕಾರ್ಯಕ್ರಮಗಳು

(3ನೇ ಪುಟದಿಂದ)

ಸ್ವಲ್ಪವಾದರೂ ಬೆಲೆ ಇರಲಿ ಎಂದು ಪ್ರೆಸ್ಸಿನ ಕೆಲಸ ಕಲಿಸಿದ್ದೆ. ಈ ಸಂದರ್ಭವೇ ಮೇಲ್ಕಂಡಂತೆ ಆಕೆಯ ವಿರುದ್ಧ ಅಪಪ್ರಚಾರಕ್ಕೆ ಬಳಕೆಯಾದದ್ದು. ಅಷ್ಟೇ ಹೊರತು, ಆಕೆ ಅಂತರ್ಜಾತಿ ವಿವಾಹಿತನಾದ ನನ್ನ ಮನೆಯಲ್ಲಿದ್ದುದರಿಂದಲೇ ಮದುವೆಗೆ ತೊಂದರೆಯಾಯಿತು ಎಂಬುದು ಮತ್ತೊಂದು ಸುಳ್ಳು ಪ್ರಚಾರ ಮಾತ್ರ.]

ಹೀಗೆ ಈ ಎಲ್ಲ ಸನ್ನಿವೇಶಗಳು ನಮ್ಮನ್ನು ಮಾನಸಿಕವಾಗಿ ಅಂತರ್ಜಾತಿ ವಿವಾಹಕ್ಕೆ ಸಿದ್ಧ ಪಡಿಸಿದ್ದ ಸಮಯದಲ್ಲೇ, ಚಿಕ್ಕಮಗಳೂರಿನ ನಮ್ಮ ಆತ್ಮೀಯ ಗೆಳೆಯ ಮಂಜಪ್ಪನವರ ತಮ್ಮನಾದ ಸಿದ್ದುಸ್ವಾಮಿಯ ಮದುವೆ ಪ್ರಸ್ತಾಪ ಬಂದು, ಆಕಸ್ಮಿಕವಾಗಿ ಈ ಸಂಬಂಧದ ವಿಚಾರ ನಮ್ಮಗಳಿಗೆ ಹೊಳೆದದ್ದು.

ಆಗ ನಾವು ಈ ಪ್ರಸ್ತಾಪದ ಸಾಧ್ಯಾ-ಸಾಧ್ಯತೆಗಳನ್ನು, ಸಾಧಕ-ಬಾಧಕಗಳನ್ನು ಕುರಿತು ಗಂಭೀರವಾಗಿ ಚರ್ಚಿಸಿದೆವು. ಅನಂತರ ಮಾಮೂಲಿನಂತೆ ಹುಡುಗ-ಹುಡುಗಿ ನೋಡಿ ಒಪ್ಪಿದ ನಂತರ ಮದುವೆಯ ನಿರ್ಧಾರ ಮಾಡಿದೆವು.

ಮದುವೆಗೆ ಮೊದಲು ಹುಡುಗ ಮತ್ತು ಆತನ ಅಣ್ಣ-ಅತ್ತಿಗೆ, ಅಕ್ಕ-ಭಾವ ಇವರುಗಳೊಂದಿಗೆ ಸಿರಿಮನೆಗೆ ಹೋದೆವು. ನಮ್ಮ ತಂದೆ-ತಾಯಿಗಳಿಗೆ ಹುಡುಗ ಇಷ್ಟವಾದ. ಆದರೆ ಲಿಂಗಾಯತರಿರಬಹುದು ಎಂದುಕೊಂಡಿದ್ದ ಅವರಿಗೆ ಹುಡುಗ ಹರಿಜನ ಎಂದು ಸ್ಪಷ್ಟಪಡಿಸಿದಾಗ ಮಾತ್ರ ಸ್ವಲ್ಪ ಹೆಚ್ಚು ಆಘಾತವಾಯಿತು. ಜಾತಿಯ ಬಗ್ಗೆ ಸುಳ್ಳು ಹೇಳಬಹುದಿತ್ತು. ಆದರೆ ತಂದೆ-ತಾಯಿಗಳೆದುರು ಸತ್ಯವನ್ನು ಮರೆಮಾಚುವುದು ನಮಗಾರಿಗೂ ಒಪ್ಪಿಗೆಯಿರಲಿಲ್ಲ.

(ಆಘಾತವಾದುದು ನಮ್ಮ ತಂದೆಗೇ ಸ್ವಲ್ಪ ಹೆಚ್ಚು. ನಮ್ಮ ತಾಯಿಯಾದರೂ, ಸುತ್ತ ಮುತ್ತ ನಾನಾ ಕಾರಣಕ್ಕೆ, ಮುಖ್ಯವಾಗಿ ವರದಕ್ಷಿಣೆ ಸಾಲದೆಂಬುದಕ್ಕೆ ಹೆಣ್ಣುಗಳನ್ನು ಗಂಡನ ಮನೆಯಲ್ಲಿ ಸುಡುವ; ಬಾವಿಗೆ ದೂಡುವ; ಮಳೆಗಾಲದಲ್ಲಿ ಒಂದು ಎತ್ತಿನ ಜೊತೆಗೆ ಇನ್ನೊಂದು ಎತ್ತಿನ ಬದಲು ಸೊಸೆಯನ್ನು ಹೂಟಿಗೆ ಕಟ್ಟಿ ಲಕ್ಕಿ ಬರ್ಲಿನಿಂದ ಜೆಪ್ಪಿ ಹಿಂಸಿಸುವ ಸಂಗತಿಗಳನ್ನೆಲ್ಲ ನೋಡಿ, ಕೇಳಿ ತನ್ನ ಮಗಳು ಎಲ್ಲಾದರೂ ಸರಿ, ಸುಖವಾಗಿರುವುದು ಮುಖ್ಯ ಎಂಬ, ತಮ್ಮ ಅಂತಃಕರಣಕ್ಕೆ ನೇರವಾದ ಒಂದೇ ಒಂದು ಆಸೆ ಇಟ್ಟುಕೊಂಡಿದ್ದವರು ಹಾಗಾಗಿ ಅವರು ಹೆಚ್ಚು ಧೃತಿಗೆಡಲಿಲ್ಲ.)

ನಂತರ ಅವರುಗಳೊಂದಿಗೆ ಬಹಳ ವಿಷದವಾಗಿ ಚರ್ಚಿಸಿದೆವು. ಇಬ್ಬರೂ ಪುನಃ ಧೈರ್ಯ ತಂದುಕೊಂಡರು. ನಮ್ಮ ತಂದೆ, "ಅವಳು ಸುಖವಾಗಿ ಇರುವುದು ನನಗೆ ಮುಖ್ಯ. ಈ ಮದುವೆಯಿಂದ ಅವಳು ಸುಖವಾಗಿರುತ್ತಾಳೆಂಬ ಬಗ್ಗೆ ನಿಮ್ಮಗಳ ಖಾತ್ರಿಯೇ ನನಗೆ ಗಟ್ಟಿ. ಅವಳಿಗೆ ಹೇಗೂ ಒಪ್ಪಿಗೆಯಿದೆ. ಅಂಥಾ ಅನಿರೀಕ್ಷಿತ ತೊಂದರೆಯೇನಾದರೂ ಸಂಭವಿಸಿದರೆ ಹೇಗೂ ನೀವೆಲ್ಲ ಅವಳ ಕೈಬಿಡುವುದಿಲ್ಲ. ಇಷ್ಟಿದ್ದ ಮೇಲೆ ಇನ್ನು ನನ್ನದೇನಿದೆ? ಅವಳು ಸುಖವಾಗಿರಲೆಂದು ಮನಃಪೂರ್ವಕವಾಗಿ ಹಾರೈಸಿ ಸಂತೋಷದಿಂದ ಆಶೀರ್ವದಿಸುತ್ತೇನೆ. ಆದರೆ ಒಂದು ಮಾತು. ನನ್ನನ್ನು ಮಾತ್ರ ಮದುವೆಗೆ ಬರಲು ಒತ್ತಾಯಿಸಬೇಡಿ. ನಾನು ಸಮಾಜದಲ್ಲಿ ಇನ್ನೂ 'ಸಂಭಾವಿತ' ಎನ್ನುವ ಹೆಸರು ಉಳಿಸಿಕೊಂಡಿದ್ದೇನೆ. ಅಲ್ಲದೆ, ನಾನು ಶ್ರಾದ್ಧಗಳನ್ನು ಮಾಡಲಿಕ್ಕಿದೆ. ಭಟ್ರುಗಳು ಬರುವುದಿಲ್ಲವೆಂದುಬಿಟ್ಟರೆ ಎಲ್ಲಿಗೆ ಹೋಗಲಿ?" ಮುಂತಾಗಿ ಹೇಳಿದರು.

ನಮ್ಮ ತಾಯಿ ಮಾತ್ರ ಬಹಳ ದೃಢ ಮನಸ್ಸಿನಿಂದ, "ನಾನು ಮಾತ್ರ ನನ್ನ ಮಕ್ಕಳನ್ನು ಬಿಟ್ಟು ಕಳೆಯುವವಳಲ್ಲ. ನನಗೆ ಯಾರೂ ನಿರ್ಬಂಧ ಮಾಡಕೂಡದು" ಎಂದು, ಪರೋಕ್ಷವಾಗಿ ನಮ್ಮ ತಂದೆಯನ್ನು ಕುರಿತು ಹೇಳಿದರು. ಅವರು ಮದುವೆಗೆ ಸಹ ಬರಲು ಸಿದ್ಧರಿದ್ದರು. ತನ್ನ ಮಕ್ಕಳ ಏಳಿಗೆ, ಸುಖ-ಸಂತೋಷಗಳ ಮುಂದೆ ಅವರಿಗೆ ಯಾವುದೂ ಲೆಕ್ಕಕ್ಕಿರಲಿಲ್ಲ. ಆದರೆ ನಾವೆಷ್ಟು ಬಗೆಯಲ್ಲಿ ಮನವರಿಕೆ ಮಾಡಿದರೂ ನಮ್ಮ ತಂದೆ ಬರಲೊಪ್ಪದ್ದರಿಂದ ತಾಯಿ ಬರಲು ಹಿಂಜರಿದರು.

ನಮ್ಮ ತಂದೆ ಇನ್ನೊಂದು ಶರತ್ತು ಹಾಕಿದ್ದರು ಈ ಮದುವೆಯಿಂದ ಊರಲ್ಲಿ ಒಮ್ಮೆ ಗೌಜು ಆಗಲಿಕ್ಕಿದೆ. ಅದೆಲ್ಲ ತಣ್ಣಗಾಗುವವರೆಗೆ, ಕಡೇಪಕ್ಷ ಒಂದೆರಡು ವರ್ಷ ಸುನಂದ-ಸಿದ್ದುಸ್ವಾಮಿ ಸಿರಿಮನೆಗೆ ಬರಕೂಡದು ಎಂದು. ಆದರೆ ಎರಡು ವರ್ಷವಾದರೂ ತಂದೆ-ತಾಯಿ-ಬಳಗವನ್ನೆಲ್ಲ ತೊರೆಯಬೇಕಾಗುವ ದುಃಖದಿಂದ ಸುನಂದ ಒಂದು ದಿನ ಅಳುವುದು ಕಂಡು ಅವರ ಮನ ಕರಗಿ, "ಅಳಬೇಡ ಕಣೆ. ಒಮ್ಮೆ ಅಲ್ಲದಿದ್ದರೆ ವರ್ಷಕ್ಕೆ ನಾಲ್ಕು ಸಲ ಬಾ. ನನ್ನ ಅಭ್ಯಂತರವೇನೂ ಇಲ್ಲ" ಎಂದು ಸಮಾಧಾನಪಡಿಸಿದ್ದರು.

ಅಂತೂ ಮದುವೆ ಚೆನ್ನಾಗಿ ಆಯಿತು. ಹೊಸ ದಂಪತಿಗಳು ವರನ ತಂದೆ-ತಾಯಿಗಳ ಊರಿಗೆ ನಾಲ್ಕು ದಿನ ಹೋಗಿ ಎಲ್ಲ ಬಂಧುಗಳ ಮನೆಗೂ ಹೋಗಿ ಬಂದ ನಂತರ ಅವರೊಂದಿಗೆ ಸಿರಿಮನೆಗೆ ಹೋದೆವು. 2 ದಿನವಿದ್ದು, ತಂದೆ-ತಾಯಿಗಳಿಗೆ ಧೈರ್ಯ ಹೇಳಿ ಬಂದೆವು.

* * *

ಸ್ವಲ್ಪ ಸಮಯದಲ್ಲಿ ಊರಲ್ಲಿ ವಿಷಗಾಳಿ ಬೀಸತೊಡಗಿತು. ಮದುವೆಗೆ ತಂದೆ-ತಾಯಿ ಒಪ್ಪಿದ್ದೇ ತಪ್ಪು ಎಂತಲೂ; ಮದುವೆಯೇನೋ ಆಯಿತು, ಆದರೆ ಮಗಳನ್ನೂ ಅವಳ ಗಂಡನನ್ನೂ ಮನೆಗೆ ಸೇರಿಸಿದ್ದು ತಪ್ಪು ಎಂತಲೂ ತೀರ್ಪುಗಳು ಬಂದವು.

'ಇದೊಂದು ಜಾತಿಯಲ್ಲದೆ ಬೇರೆ ಯಾವ ಜಾತಿಯವನಾಗಿದ್ದರೂ ಪರವಾ ಇರಲಿಲ್ಲ. ಈ ಜಾತಿಯೇ ಆಗಬೇಕಿತ್ತಾ?' ಎಂಬ, ತಕ್ಕಮಟ್ಟಿಗೆ ಕ್ರಾಂತಿಕಾರಿಯಾದ, ಘೋಷಣೆ ಕೂಡ ಆಕ್ಷೇಪಣೆಯ ರೂಪದಲ್ಲಿ ವ್ಯಕ್ತವಾಯಿತು!

ನಮ್ಮ ಮನೆಗೆ ಭಟ್ಟರು ಬರುವುದಿಲ್ಲವಂತೆ ಎಂದು ಮುಂದುವರಿದು, "ಅವರ ಮನೆಗೆ ಬೇರೆಯವರೂ ಹೋಗಿ ಬರಬಾರದು. ಯಾರಾದರೂ ಹೋದರೆ ಅವರ ಮನೆಗೂ ಭಟ್ಟರು ಹೋಗುವುದಿಲ್ಲ"; "ಅಂಥವರ ಮನೆಯ ಸೊಸೆಯಂದಿರನ್ನು ಊರಿಗೆ ಸೇರಿಸಿದರೆ ಅಲ್ಲಿಗೂ, ಅವರ ಬಂಧುಗಳಿಗೂ ಭಟ್ಟರ ಬಹಿಷ್ಕಾರ"; "ಪ್ರಾಯಶ್ಚಿತ್ತ ಮಾಡಿಕೊಂಡರೆ ಮಾತ್ರ ಈ ಪರಿಸ್ಥಿತಿಯಿಂದ ವಿಮುಕ್ತಿ" ಮುಂತಾಗಿ ಒಂದು ಬೃಹತ್ ಬಹಿಷ್ಕಾರದ ವರ್ತಮಾನ ಶೃಂಗೇರಿ ತಾಲ್ಲೂಕಿನಾದ್ಯಂತ ಬ್ರಾಹ್ಮಣ ಸಮೂಹದಲ್ಲಿ ಸಂಚರಿಸಿತು.

ಈ ಹಂತದಲ್ಲೊಮ್ಮೆ (ಫೆಬ್ರವರಿಯಲ್ಲಿ) ನಮ್ಮ ತಂದೆ ಎಲ್ಲ ದಿಕ್ಕುಗಳಿಂದಲೂ ಬಂದು ಇರಿಯತೊಡಗಿದ ಈ ಒತ್ತಡದ ಭರ್ಜಿಗಳ ಇರಿತ ತಾಳಲಾರದೆ ಹತಾಶರಾಗಿ ಪ್ರಾಯಶ್ಚಿತ್ತಕ್ಕೆ ಸಿದ್ಧರಾಗಿದ್ದರು; ಅದೂ ಬೇರೆಯವರಿಗೆ ತಮ್ಮಿಂದ ತೊಂದರೆಯಾಗುತ್ತಿದೆ ಎಂದುಕೊಂಡು. ಆಗಲೇ ಆಕಸ್ಮಿಕವಾಗಿ, (ಈ ಸಂಸಾರಕ್ಕೇ ಹಿತವಾಗಲಿದ್ದ ಒಂದು ಉದ್ದೇಶಕ್ಕಾಗಿ) ಮನೆಗೆ ಬಂದ ಮಗಳು-ಅಳಿಯನನ್ನು ನಮ್ಮ ತಂದೆ-ತಾಯಿಗಳಿಬ್ಬರೂ ಅಳುತ್ತಲೇ ಹಿಂದಕ್ಕೆ ಕಳಿಸಿದ್ದರು. ಆಗಲೂ ಅವರು ಹೇಳಿದ್ದು: "ಈ ಗಲಾಟೆಯೆಲ್ಲ ಸ್ವಲ್ಪ ತಣ್ಣಗಾಗುವವರೆಗೆ ಒಂದೆರಡು ವರ್ಷ ಮನೆಗೆ ಬರಬೇಡಿ ಕಣೆ". ಅನಂತರ ನಾನು, ನಮ್ಮ ಗೆಳೆಯರು ಅವರಿಗೆ ಸಮಾಧಾನ ಹೇಳಿ ಧೈರ್ಯ ತುಂಬಿದೆವು.

'ನಾನು ಮಾತ್ರ ನನ್ನ ಮಕ್ಕಳನ್ನು ತೊರೆಯುವವಳಲ್ಲ ನನಗೆ ಯಾರೂ ನಿರ್ಬಂಧ ಮಾಡಕೂಡದು'.... ಎಂಥ ಅಂತಃಕರಣ! ಇದೇ ನಿಜವಾದ ಧರ್ಮ, ಅಂತಃಕರಣದ ಧರ್ಮ, ಅಲ್ಲವೆ? ಈ ಮಾತೃಧರ್ಮವನ್ನು ಮೀರಿ, ಅದಕ್ಕೂ ನಿರ್ಬಂಧ ಹೇರುವ, ಅಂತಃಕರಣರಹಿತವಾದ ಬೇರೆಲ್ಲ ಶಾಸ್ತ್ರ ಧರ್ಮಗಳೂ ಎಂಥವೆನ್ನಬೇಕು? ಬರೀ ಅಕ್ಷರ ಪಾಂಡಿತ್ಯದ ಕಸದ ರಾಶಿ ಮಾತ್ರ, ಅಲ್ಲವೆ? ಅಂಥ ಕಸದ ಧರ್ಮರಾಶಿ ತೂರಿ ಹೋಗಲು ಎಷ್ಟು ಕಾಲ ಬೇಕು?

ನಮ್ಮ ತಂದೆಗೆ, ಭಟ್ಟರು ಬರದಿದ್ದರೆ ಶ್ರಾದ್ಧ ಮಾಡಲು ವಡಭಾಂಡೇಶ್ವರಕ್ಕೆ ಹೋಗಬಹುದೆಂಬ ಧೈರ್ಯವಿತ್ತು. ಮನೆಯಲ್ಲೇ ಆಗಬೇಕಾದಂಥ ಹಬ್ಬ-ಹರಿದಿನಗಳಿಗೆ ಬೇಕಿದ್ದರೆ ಒಳ್ಳೆಯ ಆಗಮ ಪಂಡಿತರಾದ ಭಟ್ಟರನ್ನೇ ಕರೆತರುತ್ತೇವೆ ಎಂದು ನಮ್ಮ ಗೆಳೆಯರು ತಂದೆಗೆ ಧೈರ್ಯ ಹೇಳಿದರು ಹೀಗಾಗಿ, ಭಟ್ಟರುಗಳ ಒಳ-ಹೊರಗು ಪೂರ್ತಿ ಗೊತ್ತಿದ್ದ ನಮ್ಮ ತಂದೆ ಮತ್ತಿತರ ಬಂಧುಗಳು ಈ ಬಹಿಷ್ಕಾರದ ಒತ್ತಡಕ್ಕೆ ಜಗ್ಗುವಂತೆ ತೋರಲಿಲ್ಲ.

ಅಲ್ಲದೆ ಭಟ್ಟರಲ್ಲೇ ಕೆಲವರು ಈ ಬಹಿಷ್ಕಾರವನ್ನು ಒಪ್ಪಲಿಲ್ಲ. ಬಹಿಷ್ಕಾರದ ಕಿಚ್ಚಿಗೆ ಕಾರಣರಲ್ಲದ ಕೆಲ ಭಟ್ಟರನ್ನು ನಾವು ವಿಚಾರಿಸಿದಾಗ ತಾವು ಹಾಗೆ ಹೇಳಿಯೇ ಇಲ್ಲ. ಈಗಲೂ ಹಿಂದಿನಂತೆಯೇ ನಿಮ್ಮ ಮನೆಗೆ ಬರಲು ಸಿದ್ಧ ಎಂದ ಭಟ್ಟರೂ ಉಂಟು.

ಅಂತೂ ನಮ್ಮ ಈ ಎಲ್ಲ ಪ್ರಯತ್ನಗಳಿಂದಾಗಿ ನಮ್ಮ ತಂದೆ, "ಹಾಗಾದರೆ ನಾನಿನ್ನು ನಿಶ್ಚಿಂತೆಯಿಂದ ಇರುತ್ತೇನೆ" ಎಂದು ಧೈರ್ಯ ತಾಳಿದರು. (ಅನಂತರ ಮುಂದೆ ಯುದ್ಧರಂಗದಲ್ಲಿ ಶಿಖಂಡಿ ಎದುರಾಗುವವರೆಗೂ ಈ ಭೀಷ್ಮಾಚಾರ್ಯರನ್ನು ಯಾರಿಂದಲೂ ಯಾವುದರಿಂದಲೂ ಮಣಿಸಲಾಗಲಿಲ್ಲ.)

ಆದರೆ, ಬ್ರಾಹ್ಮಣ ಸಂಘದ ಮುಖಂಡರು ತಮ್ಮ ಕಲ್ಯಾಣ ಕೈಂಕರ್ಯವನ್ನು ಇನ್ನೂ ಚುರುಕುಗೊಳಿಸಿದರು. 'ಈ ಕುಟುಂಬದವರ ಜೊತೆ ಸಂಪರ್ಕ ಇಟ್ಟುಕೊಳ್ಳುವ ಎಲ್ಲರಿಗೂ ಬಹಿಷ್ಕಾರ' ಎನ್ನುವ ಘೋಷಣೆಯನ್ನು ಕಾರ್ಯರೂಪಕ್ಕೂ ತರಲಾಯಿತು. ಮೇ 7 ರಂದು ಗೊತ್ತಾಗಿದ್ದ ನಮ್ಮ ಚಿಕ್ಕಪ್ಪ ಒಬ್ಬರ ಮಗಳ ಮದುವೆಗೆ ಭಟ್ಟರು ಬಾರದೆ ಉಳಿದರು. ಹೋದ ವರ್ಷವೇ ಈ ಸಂಬಂಧ ಗೊತ್ತಾಗಿದ್ದುದು. ಈ ಹಗರಣಗಳ ಆರಂಭದಲ್ಲೇ ಎರಡು ಕಡೆಗೂ ಎರಡು ಬಗೆಯ 'ವರ್ತಮಾನ' ಬಿಡುವ ಮೂಲಕ ಈ ಸಂಬಂಧವನ್ನು ಕಡಿದು ಹಾಕುವ ಪ್ರಯತ್ನ ಕೂಡ ನಡೆದಿತ್ತು.

ಈ ಒತ್ತಡಗಳಿಂದಾಗಿ ಆ ಚಿಕ್ಕಪ್ಪ ಮದುವೆಗೆ ತನ್ನ ಖಾಸಾ ಅಣ್ಣನಾದ ನಮ್ಮ ತಂದೆಯನ್ನು ಮತ್ತು ನಮ್ಮ ಮನೆಯ ಇತರರನ್ನು ಆಹ್ವಾನಿಸಲಿಲ್ಲ. ಆದರೂ ಭಟ್ಟರು ಬರಲಿಲ್ಲ. ಅಂತೂ ಕೊನೆಗೆ ನಮ್ಮ ಪಕ್ಕದ ಹಳ್ಳಿಯ ವಯೋವೃದ್ಧ ಪುರೋಹಿತರೊಬ್ಬರು ನೇತೃತ್ವ ವಹಿಸಿ ಮದುವೆ ನೆರವೇರಿಸಿದರು.

ಇನ್ನೊಬ್ಬ ಚಿಕ್ಕಪ್ಪನವರ ಸೊಸೆಯ ತೌರಿನವರು ಯುಗಾದಿಯ ಹೊಸ ಹಬ್ಬಕ್ಕೆ ತನ್ನ ಮಗಳು – ಅಳಿಯನನ್ನು ಕರೆಯಲಿಲ್ಲ. ಅಳಿಯ ಹೋಗಿ ಯಾಕೆ ಕರೆಯಲಿಲ್ಲ ಎಂದು ವಿಚಾರಿಸಿದೊಡನೆ ಏನೋ ನೆಪ ಹೇಳಿಕೊಂಡು ಬಂದು ಇಬ್ಬರನ್ನೂ ಕರೆದೊಯ್ದರು.

ಹೀಗೆ ನಮ್ಮ ತಂದೆಯವರ ಮೇಲೆ ಮಾನಸಿಕವಾಗಿ ಒತ್ತಡದ ಮೇಲೆ ಒತ್ತಡ ಹೇರಿ ಹಣ್ಣು ಮಾಡತೊಡಗಿದರು. ತನ್ನಿಂದ ಬೇರೆಯವರಿಗೆ ಹಿಂಸೆಯಾಗುತ್ತಿದೆ ಎಂಬ ಭಾವನೆ ಬರುವಂತೆ; ಅಕ್ಕಪಕ್ಕದ ತಮ್ಮಂದಿರ ಕುಟುಂಬಗಳು ಕೂಡ ತಮ್ಮನ್ನು ತೊರೆದರೆ ತನ್ನ ಮತ್ತು ತನ್ನ ಮಕ್ಕಳ ಕುಟುಂಬಗಳು ಅಲ್ಲಿ ಬದುಕಲು ಸಾಧ್ಯವಿಲ್ಲ ಎಂದು ಅವರ ಮನಸ್ಸಿನಲ್ಲಿ ಭೀತಿ ಹುಟ್ಟುವಂತೆ ಅವರ ಮನಸ್ಸಿನ ಮೇಲೆ ಸತತವಾಗಿ ಸವಾರಿ ಮಾಡಲಾಯಿತು.

ಇನ್ನೊಂದು ಕಡೆಯಿಂದ ಪ್ರಾಯಶ್ಚಿತ್ತದ ಮಾರ್ಗವನ್ನೂ ಅವರ ಮುಂದಿಡಲಾಯಿತು. 'ಹರಿಹರಪುರದ ಗುರುಗಳ ಹತ್ತಿರ (ಶಿವಳ್ಳಿ ಜಾತಿಯ ಗುರುಪೀಠ) ಹೋಗಿ ಬಂದು (ಅಂದರೆ ಅವರಿಗೆ ಶರಣಾಗಿ

(5ನೇ ಪುಟಕ್ಕೆ)

ಬಹಿಷ್ಕಾರ, ಪ್ರಾಯಶ್ಚಿತ್ತ ಇತ್ಯಾದಿ 'ಕಲ್ಯಾಣ' ಕಾರ್ಯಕ್ರಮಗಳು

(4ನೇ ಪುಟದಿಂದ)

ಪ್ರಾಯಶ್ಚಿತ್ತ ಬೇಡಿಕೊಂಡು) ಮನೆಗೆ ಶುದ್ಧ–ಪುಣ್ಯಾಹ ಮಾಡಿ, ಪಂಚಗವ್ಯ ತೆಗೆದುಕೊಂಡರೆ ಎಲ್ಲ ಸರಿಹೋಗುತ್ತೆ. ಆಮೇಲೆ ಮಾತ್ರ ಸುನಂದನನ್ನೂ ಅವಳ ಗಂಡನನ್ನೂ ಮನೆಗೆ ಸೇರಿಸದಿದ್ದರಾಯಿತು, ಅಷ್ಟೇ'—ಇದೇ ಆ 'ಸೂತ್ರ'. ಬರಬರುತ್ತ ಈ ರೀತಿ ಬಹಿಷ್ಕರಿಸಲ್ಪಡಬೇಕಾದವರ ಪಟ್ಟಿಯಲ್ಲಿ; ನನ್ನ ಹೆಸರು ಹಾಗೂ ನಮ್ಮಿಬ್ಬರನ್ನೂ ತನ್ನ ಮನೆಗೆ ಸೇರಿಸದೆ ಇರಲಾರೆ ಎಂದು ದೃಢ ನಿರ್ಧಾರ ತಾಳಿ ಇಂದಿನವರೆಗೂ ಹಾಗೇ ನಡೆದುಕೊಳ್ಳುತ್ತಿರುವ ನನ್ನ ಕೊಡಿಗೆಯ ತಮ್ಮನ ಹೆಸರು—ಇವೂ ಸೇರಿಕೊಂಡವು. ಕ್ರಮೇಣ, ನಾವುಗಳು ಮನೆಗೆ ಬರಬಾರದು ಮಾತ್ರವಲ್ಲ, ನಮ್ಮಿಷ್ಟು ಜನರ ಮನೆಗಳಿಗೂ ಯಾರೂ ಬಂದುಹೋಗಬಾರದು—ಎಂಬಲ್ಲಿಯವರೆಗೂ ಬಂತು.

ಮೊದಲು ಸುನಂದನನ್ನು ಮನೆಗೆ ಸೇರಿಸಬಾರದು ಎಂದು ನಿರ್ಣಯವಾದಾಗ ನಮ್ಮ ಅಮ್ಮ, "ಅವಳನ್ನು ಕೊಡಿಗೆಗೋ, ಕೊಪ್ಪಕ್ಕೋ ಕರೆದುಕೊಂಡು ಬನ್ನಿ. ನಾನು ಅಲ್ಲಿಗಾದರೂ ಬಂದು ಅವಳಿಗೆ ಮಾಡಿ ಇಕ್ಕಿ ಸಂತೋಷಪಡುತ್ತೇನೆ" ಎಂದಿದ್ದಳು. ಈಗ 'ಯಾವ ರೀತಿಯ ಸಂಪರ್ಕವೂ ಕೂಡದು' ಎಂದಾಗುತ್ತಲೇ ಅವಳ ಈ ಕೊನೇ ಆಸೆಗೂ ಬೆಂಕಿ ಬಿತ್ತು. ಎಲ್ಲವನ್ನೂ ಕಡೆಗಣಿಸಿ, ತನ್ನ ಅಂತಃಕರಣದ ನೇರಕ್ಕೆ ನಡೆದುಕೊಳ್ಳುತ್ತೇನೆಂದರೆ, ನಮ್ಮ ತಂದೆಗೆ ಎಲ್ಲಿ ಪರೋಕ್ಷವಾಗಿ ಚುಚ್ಚಿಕೊಟ್ಟು ಅವರು ತಮ್ಮ ಬತ್ತಳಿಕೆಯ ಕೊನೇ ಅಸ್ತ್ರ ತೆಗೆದುಕೊಳ್ಳುವಂತೆ ಮಾಡುತ್ತಾರೋ ಎಂಬ ಒಂದೇ ಭಯ. ಹೀಗಾಗಿ ಅವಳಿಗೆ ಕಣ್ಣೀರು ಗರೆಯುವುದು ಬಿಟ್ಟರೆ ಬೇರೆ ಮಾರ್ಗವಿಲ್ಲವಾಯ್ತು.

ಈ ಹಂತದಲ್ಲಿ ನಮ್ಮ ನೆರಮನೆಯ ಇಬ್ಬರು ಪ್ರಾಯಕ್ಕೆ ಬಂದ ಹೆಣ್ಣು ಮಕ್ಕಳು ಏಪ್ರಿಲ್ ಕೊನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಅಪರಂಜಿಯಂಥ ಗುಣದ ಈ ಇಬ್ಬರೂ 'ಎರಡು ದೇಹ–ಒಂದು ಹೃದಯ' ಎಂಬಂತಿದ್ದವರು. ನಮ್ಮ ಸುನಂದನ ಆತ್ಮೀಯರು. ಅಂದವಾಗಿ ಸಿಂಗರಿಸಿಕೊಂಡು ಪೇಟೆಯ ಜೀವನಕ್ಕೆ ಕೂಡ ಒಗ್ಗಿಕೊಳ್ಳಬಲ್ಲವರಾಗಿದ್ದ ಇವರು ಮನೆಯಲ್ಲಿ ಒಳಗೆ–ಹೊರಗೆ ಎರಡೂ ಕಡೆ ಕೂಲಿ ಹೆಣ್ಣುಗಳಿಗಿಂತ ಹೆಚ್ಚಾಗಿ ಹಗಲೂ ರಾತ್ರಿಯೆನ್ನದೆ ದುಡಿಯುತ್ತಿದ್ದರು.

ಇಂಥ ಅಪರಂಜಿಗಳಿಗೆ ಕೂಡ ನಿಮ್ಮ ಈ ಜಾತಿ ಶ್ರೇಷ್ಠರ ಸಮಾಜ ಮದುವೆಯನ್ನು ದಯಪಾಲಿಸಲಿಲ್ಲ! ಜಾತಕದ ದೋಷ ಎಂಬ ಕಾರಣಕ್ಕೆ ಹಿರಿಯವಳಿಗೆ (ಕೇವಲ 26 ವರ್ಷ) ಗಂಡು ಸಿಗುವುದು ದುಸ್ತರವಾಯಿತು. ತಂದೆಯಿಲ್ಲದೆ, ಅಣ್ಣಂದಿರ ನೆರಳಲ್ಲಿ ಮದುವೆಯ ಕನಸು ಕಾಣಬೇಕಾಗಿದ್ದ ಈ ರತ್ನಗಳಿಗೆ, ಇತ್ತ ಪ್ರೀತಿ ಸಂತೋಷಗಳು ಮರೀಚಿಕೆಯಾಗಿ, ಅತ್ತ ವಿವಾಹ ಜೀವನದ ಕನಸು ಕೂಡ ಹಗಲುಗನಸು ಮಾತ್ರವೇನೋ ಎಂಬ ಅನುಮಾನ ದೃಢವಾಗತೊಡಗುತ್ತಲೇ ಈ ರೀತಿಯಲ್ಲಿ "ತಮ್ಮ ದಾರಿ ತಾವು ನೋಡಿಕೊಂಡು ಬಿಟ್ಟರು."

ಅವರ ಹೃದಯದ ಗಾಯಗಳನ್ನು ಬಿಚ್ಚಿ ತೋರಿಸಲು ಅವರಿಗೆ ಏಕೈಕ ಆಸರೆಯಾಗಿದ್ದ ಸುನಂದ ಅವರಿಂದ ದೂರಾಗುವುದರೊಂದಿಗೆ ಅವಳಿಗೆ ಹೃದಯ ಬಿಚ್ಚಿ ಕಾಗದ ಬರೆಯುವುದೂ ದುಸ್ತರವೆನ್ನುವಂತಾದುದು ಒಂದು ಕಡೆಯಾದರೆ; ಅವರ ತಾಯಿಯಷ್ಟೇ ಆತ್ಮೀಯತೆಯಿಂದ ಅವರ ಆ ಗಾಯಗಳಿಗೆ ಸಾಂತ್ವನದ ಪನ್ನೀರು ಚಿಮುಕಿಸುತ್ತಿದ್ದ ನನ್ನ ತಾಯಿಯ ಬಳಿಗೂ ಅವರು ಹೋಗುವುದು ನಿರ್ಬಂಧಿಸಲ್ಪಡುವಂಥ ಈ ಬಹಿಷ್ಕಾರ ಇನ್ನೊಂದು ಕಡೆ. ಉಸಿರು ಕಟ್ಟುವ ಈ ಗವಿಯಿಂದ ಹೊರಗೆಲ್ಲಾದರೂ ಹೋಗಿ ದುಡಿದಾದರೂ ಬದುಕುತ್ತೇನೆನ್ನಲು ಅದಕ್ಕೆ ಬೇಕಾದ ವಿದ್ಯೆಯ ತಳಹದಿಯೂ ಸಾಕಷ್ಟಿರಲಿಲ್ಲ. ಹೋಗಲಿ, ಅಂತರ್ಜಾತಿ ವಿವಾಹಕ್ಕಾದರೂ ಸಿದ್ಧ ಎಂದರೆ ಅದಕ್ಕೆ ಬೆಂಬಲಿಸುವವರಿಲ್ಲ. ಪಾಪ, ಅವರ ತಾಯಿ ಕೂಡ ಅಸಹಾಯಕತೆಯ ಬಂದಿಯಾಗಿದ್ದರು.

ಈ ಎಲ್ಲ ಬಗೆಯ ಸುಳಿಗಳುಳ್ಳ ಮಡುವಿನಲ್ಲಿ ಇನ್ನು ಈಜಿ ಬದುಕಿಯೇವೆಂಬ ಆಸೆಯ ಕೊನೆಯ ಹನಿಯೂ ಬತ್ತಿಹೋದುದೇ ಬಹುಶಃ ಅವರ ಅಂತಿಮ ನಿರ್ಧಾರಕ್ಕೆ ಕಾರಣವಾಗಿರಬೇಕು. ಬೇರಾವ ಕಾರಣವೂ ಇರುವುದು ಸಾಧ್ಯವಿಲ್ಲ. ಅವರುಗಳ ಮರಣೋತ್ತರ ಮಹಜರಿನಲ್ಲಿ ಮಾತ್ರ "ಅವರಿಬ್ಬರೂ ಜಗಳಾಡಿಕೊಂಡು ವಿಷ ತೆಗೆದುಕೊಂಡರು" ಎಂಬುದಾಗಿ ಅವರ ಚಿಕ್ಕ ತಂಗಿಯಿಂದ ಹೇಳಿಕೆ ಕೊಡಿಸಲಾಗಿದೆಯಂತೆ. ಅವರು ಜಗಳಾಡಿಕೊಂಡರೆಂದರೆ ಅದು 'ಅವರಿನ್ನೂ ಬದುಕಿದ್ದಾರೆ' ಎಂದಷ್ಟೇ ಸತ್ಯ!

ಈ ಬೆಂಕಿಯಲ್ಲೂ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಈ ಮುಖಂಡರ ವರಸೆ ನೋಡಿ—

ಈ ಹೆಣ್ಣು ಮಕ್ಕಳಿಗೆ ಗಂಡು ನೋಡಲು ಹೋದಲ್ಲೆಲ್ಲ "ಯಾಕೆ, ನಿಮಗೆ ಹರಿಜನ ಹುಡುಗರ್‍ಯಾರೂ ಸಿಕ್ಕಲಿಲ್ಲವಾ?" ಎಂದು ಕೇಳುತ್ತಿದ್ದರಂತೆ. ಅದು ಇವರಿಗೆ ಗೊತ್ತಾದಾಗ ಮನನೊಂದು ಆತ್ಮಹತ್ಯೆ ಮಾಡಿಕೊಂಡರಂತೆ! ಹೀಗೊಂದು ಪ್ರಚಾರವನ್ನು ತೇಲಿಬಿಡಲಾಗಿದೆ. ಇದು, ಇಡೀ ಸಮಾಜವನ್ನೂ, ತಮ್ಮ ತಮ್ಮ ಮನೆಗಳನ್ನೂ ಹೀಗೆ ಉಸಿರುಗಟ್ಟುವ ಗವಿಗಳನ್ನಾಗಿಸಿಕೊಂಡು ಅಲ್ಲಿ ಇಂಥ ಅಸಂಖ್ಯ ಹೆಣ್ಣು ಕುಡಿಗಳನ್ನು ಕಮರಿಸುತ್ತಿರುವ ಈ ಜಾತಿ ಶ್ರೇಷ್ಠರು ತಮ್ಮ ಅಪರಾಧವನ್ನು ಮುಚ್ಚಿಕೊಳ್ಳಲು ಕಂಡು ಹಿಡಿದಿರುವ ಉಪಾಯ ಮಾತ್ರ.

ಇಷ್ಟೆಲ್ಲ ಒತ್ತಡಗಳ ಫಿರಂಗಿ ದಾಳಿಯನ್ನೂ ಎದುರಿಸಿ ನಿಂತ ನಮ್ಮ ತಂದೆ ಪ್ರಾಯಶ್ಚಿತ್ತದ ಉರುಲಿಗೆ ಮಣಿಯುವ ಸೂಚನೆಯೇ ಕಾಣದಾದಾಗ ಏಪ್ರಿಲ್ ಕೊನೆಯ ಹೊತ್ತಿಗೆ ಈ ಮುಖಂಡರ ಪಡೆ ನಮ್ಮ ತಂದೆಯ ಮನೆಯೊಳಕ್ಕೇ ಸುರಂಗ ಕೊರೆಯಿತು. ಎಲ್ಲ ಕೋಟೆಯೊಳಗೂ ಮೀರ್ ಜಾಫರ್‌ಗಳು ಇದ್ದೇ ಇರುತ್ತಾರೆ. ಇಲ್ಲೂ ಅಷ್ಟೆ. ಇಬ್ಬರು ಹಿರಿಯ ಮಕ್ಕಳು, ತಮ್ಮ ಹೆಂಡಿರೊಂದಿಗೆ "ತಂದೆಯ ಮೇಲಿನ ಏಕಮಾತ್ರ ಪ್ರೀತಿಯಿಂದ" ಎಂಬ ಶಿಖಂಡಿಯನ್ನು ಮುಂದಿಟ್ಟುಕೊಂಡು ಏಕಾಏಕಿ ಮುಗಿಬಿದ್ದಾಗ, ನನ್ನ ಅಜೇಯ ಭೀಷ್ಮಾಚಾರ್ಯರು ಸೋಲೊಪ್ಪಿದರು.

ಮತ್ತೆಲ್ಲ ಇವರುಗಳ ಇಂಗಿತ ಮಾತ್ರದಿಂದಲೇ ಜರುಗಿತು. ಬಹಿಷ್ಕಾರ, ಶುದ್ಧೀಕರಣ, ಪ್ರಾಯಶ್ಚಿತ್ತಗಳ ವಿಧಿಗಳೆಲ್ಲವೂ ಹಿಂದೆಯೇ ನಿರ್ಧರಿತವಾಗಿದ್ದುವಲ್ಲ. ಅಷ್ಟು ಮಾಡಿ ಬಿಟ್ಟರೆ ಭಟ್ಟರೆಲ್ಲ ಹಿಂದಿನಂತೆಯೇ ಬಂದು ಹೋಗುವಂತೆ ಮಾಡುವ, ಅಥವಾ ಅವರು ಬರಲೊಪ್ಪದಿದ್ದರೆ ಬೇರೆ ಭಟ್ಟರನ್ನು ಕಳಿಸುವ ಜವಾಬ್ದಾರಿಯನ್ನು ಗುರು ಪೀಠ ಹೊತ್ತಿತು. "ಆದರೆ ಪುನಃ ಏನಾದರೂ ಸುನಂದ ಆಗಲಿ. ನಾಗರಾಜನಾಗಲಿ ಆ ಮನೆಗೆ ಬಂದರೆ ಮಾತ್ರ ಭಟ್ಟರ ಬಗೆಗಿನ ಈ ಜವಾಬ್ದಾರಿ ನಾವು ಹೊರಲಾಗುವುದಿಲ್ಲ. ಆ ಮೇಲೂ ಬೇಕಿದ್ದರೆ ಪ್ರಾಯಶ್ಚಿತ್ತ ಮಾಡಿ ಜಾತಿಗೆ ಸೇರಿಸಿಕೊಳ್ಳಬಹುದು. ಅಷ್ಟೇ" ಎಂಬ ತಾಕೀತನ್ನೂ ಗುರುಗಳು ಮಾಡಿದ್ದರಂತೆ.

ಈ ಎಲ್ಲ ರಣ ತಂತ್ರಗಳ ತೆರೆಮರೆಯ ಸೇನಾಧಿಪತ್ಯ ವಹಿಸಿದ್ದ ಮುಖಂಡ, ಈಗ ಮರೆಯಿಂದ ಹೊರ ಬಂದು ಅಪ್ಪಣೆ ಕೊಡಿಸಿದ್ದೇನೆಂದರೆ—

"ಕಟ್ಣದ ಒಂದು ಕಲ್ಲು ಬಿದ್ದುಹೋಗಿದೆ. (ಕಟ್ಣ=ಕಲ್ಲಿನ ಕಚ್ಚಾ ಗೋಡೆ, revetment) ಆದರಿಂದಾಗಿ ಉಳಿದ ಕಲ್ಲುಗಳೂ ಅಲುಗಾಡತೊಡಗಿವೆ. ಆ ಕಲ್ಲನ್ನು ಪುನಃ ಅದರ ಜಾಗದಲ್ಲಿಟ್ಟು ಭದ್ರ ಮಾಡದಿದ್ದರೆ ಇಡೀ ಕಟ್ಣವೇ ಜರಿದು ಹೋಗುತ್ತದೆ. (ಹಾಗೆ ನಿಮ್ಮ ತಂದೆಯನ್ನೂ ಪುನಃ ಜಾತಿಗೆ ಸೇರಿಸಿಕೊಳ್ಳಲೇ ಬೇಕಾಗಿದೆ.) ಒಳ್ಳೆ ಮಾತಿಗೆ ಬಗ್ಗದಿದ್ದುದಕ್ಕೆ ಮೂಗು ಒತ್ತಿ ಬಾಯಿ ಕಳೆಸಿದ್ದೇವೆ. 'ಅಂತರ್ಜಾತಿ ಮದುವೆ ಏನು ತಪ್ಪು? ನಾವೂ ಅದಕ್ಕೆ ತಯಾರು' ಎಂದು ಹೇಳುತ್ತಿರುವ ಬೇರೆಲ್ಲ ಹೆಣ್ಣು ಮಕ್ಕಳಿಗೂ ಅವರ ಕುಟುಂಬದವರಿಗೂ ಇದೊಂದು ಎಚ್ಚರಿಕೆಯಾಗಬೇಕು. ಅದಕ್ಕಾಗಿ ಈ ಎಲ್ಲ ಸನ್ನಿವೇಶ ನಿರ್ಮಾಣ ಮಾಡಿದ್ದೇವೆ."

ಹೀಗೆ ಎಲ್ಲ ಸಿದ್ಧತೆ ಮಾಡಿಕೊಂಡ ಇವರುಗಳು ಮೇ 15 ಕ್ಕೆ ಮನೆಗೆ ಪುಣ್ಯಾಹ ಹಾಗೂ 17 ರಂದು ಕಿಗ್ಗದ ಸಮೀಪ ಹರಡಗೋಡಿನ ಕಾರ್ಯಕ್ರಮವೊಂದಕ್ಕೆ ಬರಲಿದ್ದ ಗುರುಗಳಿಂದ ತಂದೆಯವರಿಗೆ ತೀರ್ಥ ಕೊಡಿಸುವುದು ಎಂದು ನಿರ್ಣಯಿಸಿದ್ದರು. (ಆದರೆ ಭಟ್ಟರಿಗೆ ಪುರಸೊತ್ತಿಲ್ಲದೆ 15 ಕ್ಕೆ ಪುಣ್ಯಾಹ ಆಗಲಿಲ್ಲವಂತೆ.)

ಅಂದೇ ನಾನು ಮತ್ತು ಗೆಳೆಯ ಕಲ್ಕುಳಿ ವಿಠಲ ಹೆಗ್ಡೆ ಹರಿಹರಪುರ ಗುರುಗಳ ಸಂದರ್ಶನ ತೆಗೆದುಕೊಂಡು, 'ಅಸ್ಪೃಶ್ಯತೆ ನಿವಾರಣೆ ಆಗಬೇಕು' ಎಂದು ವಿಶ್ವ ಹಿಂದು ಪರಿಷತ್ತಿನಲ್ಲಿ ಘೋಷಿಸುತ್ತಲೇ ಇಲ್ಲಿ ಅಸ್ಪೃಶ್ಯತೆಯನ್ನೇ ಆಚರಿಸುವ; ಅಂತರ್ಜಾತಿ ವಿವಾಹ ಧರ್ಮಶಾಸ್ತ್ರ ನಿಷಿದ್ಧ, ಅದಕ್ಕಾಗಿ ಪ್ರಾಯಶ್ಚಿತ್ತ ಆಗಬೇಕು ಎಂದು ಹೇಳುತ್ತಲೇ ಬೇರೆಲ್ಲ ತರದ ಶಾಸ್ತ್ರ ನಿಷಿದ್ಧವಾದ ಅನಾಚಾರ, ಅಕೃತ್ಯಗಳನ್ನೂ ಮನ್ನಿಸುವ ಮೂಲಕ ಅವಕ್ಕೆ ಪರೋಕ್ಷವಾಗಿ ಪ್ರೋತ್ಸಾಹ ಕೊಡುವ; ಒಟ್ಟಿನಲ್ಲಿ ಬೋಧಿಸುವುದೊಂದು, ಮಾಡುವುದು ಮತ್ತೊಂದು, ಒಬ್ಬರಿಗೊಂದು – ಮತ್ತೊಬ್ಬರಿಗೊಂದು–ಹೀಗೆ ತಾರತಮ್ಯ ಮಾಡುವ ಅವರ ದ್ವಂದ್ವಗಳನ್ನೆಲ್ಲ ಅವರ ಮುಂದೆ ತೆರೆದಿಟ್ಟೆವು.

'ಅಂತರ್ಜಾತಿ ವಿವಾಹದಲ್ಲಿ ಏನು ತಪ್ಪಿದೆ? ನಾವೂ ಅದಕ್ಕೆ ತಯಾರು' ಎಂದು ಕೆಲ ಮಂದಿ ಪರಮ ಶ್ರೋತ್ರಿಯರ ಹೆಣ್ಣು ಮಕ್ಕಳೇ ಹೇಳುತ್ತಿದ್ದಾರಂತೆ. ಅವರಿಗೂ ನೀವು ಮೂಗು ಒತ್ತಿ ಬಾಯಿ ಕಳೆಸಿ ಪಂಚಗವ್ಯ ಹುಯ್ಯಬಹುದು ಆದರೆ ಅವರ ಅಂತರಂಗಗಳೊಳಗೆ ಹರಿಯುತ್ತಿರುವ ವಿಚಾರಗಳಿಗೆ ನೀವು ಹಾಗೆ ಮೂಗು–ಬಾಯಿ ಒತ್ತಿ ಹಿಡಿಯಲು ಸಾಧ್ಯವೆ?

(ಈ ಸಂದರ್ಶನದ ಪೂರ್ಣ ಚರ್ಚೆಯನ್ನು ಪ್ರಕಟಿಸುತ್ತೇನೆ.)

ಇದರಿಂದ ವಿಚಲಿತರಾದ ಅವರು, ತಾನು ಹರಡಗೋಡಿನ ಕಾರ್ಯಕ್ರಮಕ್ಕೆ ಹೋಗುವುದೇ ಇಲ್ಲ ಎಂದಾಗ ವಿಠಲ್ "ನೀವು ಮಾಡುತ್ತಿರುವ ಈ ಕಾರ್ಯ ಸರಿ ಎಂಬ ಆತ್ಮ ವಿಶ್ವಾಸ ನಿಮಗಿದ್ದರೆ ನೀನೇಕೆ ಚಕ್ಕರ್ ಹಾಕುತ್ತೀರಿ? ಆದರೆ ತೀರ್ಥ ಕೊಟ್ಟದ್ದೇ ಹೌದಾದರೆ, ಅದನ್ನು ಕೊಟ್ಟದ್ದು, ತಗೊಂಡದ್ದು ಎಲ್ಲವೂ ಯಾಕೆಂಬುದು ಕೊಟ್ಟವರಿಗೂ, ತಗೊಂಡವರಿಗೂ, ನೋಡಿದವರಿಗೂ ಎಲ್ಲರಿಗೂ ಗೊತ್ತೇ ಇರುವುದರಿಂದ, ಅದರ ಫೋಟೋ ತೆಗೆದು ಈ ವರದಿಯ ಜೊತೆಗೆ, 'ಪ್ರಾಯಶ್ಚಿತ್ತಕ್ಕಾಗಿ ತೀರ್ಥ ಕೊಡುತ್ತಿರುವ ಚಿತ್ರ' ಎಂದೇ ಎಲ್ಲ ಪತ್ರಿಕೆಗಳಲ್ಲೂ ಪ್ರಕಟಿಸುತ್ತೇವೆ" ಎಂದೇ ಸ್ಪಷ್ಟವಾಗಿ ಹೇಳಿದರು.

17 ಕ್ಕೆ ನಮ್ಮ (ಕೊಡಿಗೆಯ) ತಮ್ಮನ ಮದುವೆಯಿತ್ತು. ಹುಡುಗಿ ಜಾತಿಯವಳೇ. ತಂದೆಯೊಂದಿಗೆ ಹುಡುಗಿಯ ಕಡೆಯವರು ಮಾತಾಡಿಯೇ ನಿಷ್ಕರ್ಷಿಸಿದ್ದು. ಆದರೆ ಆ ಮದುವೆಗೆ ನಾನು, ಸುನಂದ ಬರುವಂತಿದ್ದರೆ ತಂದೆ–ತಾಯಿ–ಬಂಧುಗಳು ಬರುವುದಿಲ್ಲವೆಂದೂ ನಾವು ಬರದಿದ್ದರೆ ಅವರೇ ಬಂದು ಮದುವೆ ಮಾಡಿಸಿ, ಸಿರಿಮನೆಯಲ್ಲೇ ಮನೆತುಂಬಿಸಿಕೊಳ್ಳುತ್ತಾರೆಂದೂ ನಿರ್ಬಂಧ ಹಾಕಿದರು. ನಮ್ಮ ತಮ್ಮ ಅವರಿಲ್ಲದೆಯೇ ಮದುವೆಯಾಗಿ, ತನ್ನ ಪಾಳು ಜಮೀನಿನ ಗುಡಿಸಲಿನಲ್ಲೇ ನವ ವಧುವನ್ನು ಮನೆತುಂಬಿಸಿಕೊಂಡ. ಹುಡುಗಿಯ ಕಡೆಯವರು ಮತ್ತು ಆ ಜಮೀನಿನ ಬಳಿಯಿರುವ ಗಿರಿಜನ ಬಂಧುಗಳು ಹಾಗೂ ಅಲ್ಲಿ ಜಮೀನು ಹೊಂದಿರುವ ನಮ್ಮ ಚಿಕ್ಕಪ್ಪನವರ ನಾಲ್ಕು ಮಂದಿ ಮಕ್ಕಳು, ಎಲ್ಲ ಬಂದು ಸಮಾರಂಭದಲ್ಲಿ ಪಾಲ್ಗೊಂಡರು.

(6ನೇ ಪುಟಕ್ಕೆ)

ಬಹಿಷ್ಕಾರ, ಪ್ರಾಯಶ್ಚಿತ್ತ ಇತ್ಯಾದಿ 'ಕಲ್ಯಾಣ' ಕಾರ್ಯಕ್ರಮಗಳು

(5ನೇ ಪುಟದಿಂದ)

ಗುರುಗಳು ಮೇ 17ರ ಹರಡಗೋಡಿನ ಕಾರ್ಯಕ್ರಮಕ್ಕೆ ಹೋಗದೆ 16 ರಂದೇ ಹೋಗಿ ಬಂದು ತೀರ್ಥ ಕೊಡುವ 'ಸಂದಿಗ್ಧ' ದಿಂದ ನುಣುಚಿಕೊಂಡರು. ಆದರೆ, ಆ ಕೂಡಲೇ ನಮ್ಮಣ್ಣ ಮತ್ತು ಮೇಲ್ಕಂಡ ಮುಖಂಡ ಅವರಲ್ಲಿಗೆ ಹೋಗಿದ್ದರು. ಬಹುಶಃ ಅವರಿಂದ ತಾವೇ ತೀರ್ಥವನ್ನು ತೆಗೆದುಕೊಂಡು ಮನೆಗೆ ಒಯ್ದಿರಬೇಕು.

ಹೀಗೆ, ತಾವು ಮಾಡುತ್ತಿರುವುದನ್ನು 'ಸರಿ' ಎಂದು ಲೋಕದೆದುರು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲವೆಂದು ಅವರಿಗೆ ಮನವರಿಕೆಯಾದ ಮೇಲೂ ಸಹ ಶುದ್ಧೀಕರಣ ಮತ್ತು ಪ್ರಾಯಶ್ಚಿತ್ತದ ತಮ್ಮ ನಿಶ್ಚಯವನ್ನು ಅವರುಗಳು ಈಡೇರಿಸಿಯೇ ತೀರಿದ್ದಾರೆ (ಮೇ 27–29). ಆ ಮೂಲಕ ನಮಗೆ ನಮ್ಮ ತಂದೆ–ತಾಯಿಗಳ ಮನೆಯಿಂದ 'ಬಹಿಷ್ಕಾರ' ಹಾಕಿಸಿದ್ದಾರೆ.

ಇದರಲ್ಲಿ ಅವರ ಮುಷ್ಟಿಗೆ ಸಿಕ್ಕಿರುವುದು, ಮೊದಲೇ ವಯಸ್ಸು, ಅನಾರೋಗ್ಯಗಳಿಂದ ಹಣ್ಣಾಗಿದ್ದು, ಈಗಂತೂ ಅಂತಃಕರಣವನ್ನು ಹಿಂಡುವಂಥ ಈ ಎಲ್ಲ ಅಪಪ್ರಚಾರ ಮತ್ತು ಹಗರಣಗಳಿಂದ ಜರ್ಝರಿತರಾಗಿರುವ ನಮ್ಮ ತಂದೆ; ಮತ್ತೆ ಹಿಂದೆ ಹೇಳಿದಂಥ ನಮ್ಮ ಇಬ್ಬರು ಅಣ್ಣಂದಿರು ಮಾತ್ರ. ಉಳಿದಂತೆ ನಾವು ಐವರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇದನ್ನು ಕಡೆಗಣಿಸಿ ಹೊರಗೆ ನಿಂತಿದ್ದೇವೆ. (ಒಬ್ಬ ತಮ್ಮ ಆ ಮನೆಯೊಳಗೇ ಇದ್ದೂ ಇದಕ್ಕೆ ಲ್ಲ ವಿರೋಧವಾಗಿದ್ದಾನೆ.) ನಮ್ಮ ತಾಯಿ ಕೂಡ ವೈಚಾರಿಕವಾಗಿ ಇದರಲ್ಲಿ ಸಿಕ್ಕಿಲ್ಲ. ಈ ಪ್ರಾಯಶ್ಚಿತ್ತ ವಗೈರೆ ಪ್ರಸ್ತಾಪಗಳ ನಡುವೆ ಅವರು ಹೇಳಿದ ಮಾತು: **"ಎಲ್ಲರೂ ಇಷ್ಟೆಲ್ಲ ಹೇಳ್ತಾರಲ್ಲ, ನನಗಂತೂ ಇದರಲ್ಲಿ ಎಂಥದೂ ಮೈಲಿಗೆ ಅನ್ನಿಸಿಲ್ಲ."** ನಮ್ಮ ಚಿಕ್ಕಪ್ಪಂದಿರ ಮನೆಗಳಲ್ಲಿ ಕೂಡ ಮುಕ್ಕಾಲಂಶ ಜನ ಈ ಕಾರ್ಯಕ್ಕೆ ವಿರೋಧವಾಗಿದ್ದಾರೆ.

ಹೀಗೆ ನಮ್ಮ ಮನೆಯ (ಹಾಗೂ ನಮ್ಮ ಬಳಗದ) ಬಹುದೊಡ್ಡ ಭಾಗ, ಇವರ ಅಂಕೆಗೆ ಸಿಕ್ಕಿಲ್ಲ. ನಾವಾದರೂ ಅಷ್ಟೆ, ಇವರ ನಿರ್ಣಯಕ್ಕೇನೂ ಬದ್ಧರಲ್ಲ. **ನಮ್ಮ ಹೆತ್ತವರ ಬಳಿಗೆ, ನಮ್ಮ ಹೆತ್ತ ಮನೆಗೆ ನಾವು ಯಾವಾಗ ಬೇಕಾದರೂ ಹೋಗಿ ಬರಲು ಯಾವ ಕೋತಪ್ಪ ನಾಯ್ಕರ ಅಪ್ಪಣೆಯೂ ಬೇಕಿಲ್ಲ.**

ಆದರೆ ಹೀಗೆ ಬಹಿಷ್ಕಾರ ಹಾಕಿ ಪ್ರಾಯಶ್ಚಿತ್ತ ಮಾಡಿಸಿದವರ ಯೋಗ್ಯತೆ ಎಂಥದು? ಅವರ ಮನೋಭಾವ ಎಂಥದು? ಎಂಬುದು ಮಾತ್ರ ಇದರಿಂದ ಬಯಲಿಗೆ ಬಂದಂತಾಗಿದೆ.

ಇದು ಕೇವಲ ನಮ್ಮ ಹೆತ್ತವರು ನಮ್ಮ ಹೆಜ್ಜೆಯೊಂದನ್ನು ಮೆಚ್ಚದೆ, ಒಪ್ಪದೆ, ನಮ್ಮನ್ನು ದೂರವಿಟ್ಟ ಕ್ರಮವಲ್ಲ. ಆದಾಗಿದ್ದರೆ ಒಂದೋ, ನಾವು ನಮ್ಮ ಹೆಜ್ಜೆಯನ್ನು ಸರಿಪಡಿಸಿಕೊಳ್ಳುತ್ತಿದ್ದೆವು; ಅಥವಾ ನಮ್ಮ ಹೆಜ್ಜೆ ಸರಿ ಎಂದಾದರೆ ಅದು ಅವರಿಗೆ ಮನವರಿಕೆಯಾಗುವವರೆಗಾದರೂ ದೂರವೇ ಇರುತ್ತಿದ್ದೆವು. ವಾಸ್ತವವಾಗಿ ಫೆಬ್ರವರಿಯಲ್ಲಿ ನಾನು ನಮ್ಮ ತಂದೆ–ತಾಯಿಗಳಿಗೆ ಹೀಗೇ ಹೇಳಿದ್ದೆ: ಹೆತ್ತವರನ್ನು, ಹುಟ್ಟಿದ ಮನೆಯನ್ನು ತೊರೆಯುವುದು ಸುಲಭವಲ್ಲ. ಆದರೂ ತೊರೆಯಲೇ ಬೇಕೆಂದರೆ ತೊರೆಯುತ್ತೇವೆ. ನೀವು 'ಬಾ' ಎಂದರೆ ಮಾತ್ರ ಬರುತ್ತೇವೆ –ಎಂದು.

ಆದರೆ ಇಲ್ಲಿ ಪರಿಸ್ಥಿತಿ ಹಾಗಿಲ್ಲ. ನಮ್ಮ ಹೆಜ್ಜೆಯನ್ನು ನಮ್ಮ ಹೆತ್ತವರು ಮನಃಪೂರ್ವಕವಾಗಿ ಒಪ್ಪಿ ಬೆಂಬಲಿಸಿದ್ದಾರೆ–ಈವತ್ತಿನವರೆಗೂ. ಆದರೆ ಕೆಲವೇ ಮಂದಿ ಪಟ್ಟಭದ್ರ ಹಿತಾಸಕ್ತಿಗಳ ಕೂಟ–ಇಡೀ ಬ್ರಾಹ್ಮಣ ಸಮುದಾಯ ಕೂಡ ಅಲ್ಲ, ಕೆಲವೇ ಜನ ಅಪ್ಪಟ ಖದೀಮರು–ನಮ್ಮ ಕುಟುಂಬದ ಮೇಲೆ ದೌರ್ಜನ್ಯವೆಸಗಿ ಆ ಮೂಲಕ ಮಿಕ್ಕವರಿಗೆ 'ತೀವ್ರ ಎಚ್ಚರಿಕೆ' ಕೊಡಲು ಈ ಎಲ್ಲ ಕೃತ್ಯಗಳನ್ನು ಎಸಗುತ್ತಿದ್ದಾರೆ. ಇದನ್ನು ಅವರೇ ಹೆಮ್ಮೆಯಿಂದ ಹೇಳಿಕೊಂಡಿದ್ದು.

ಇತ್ತ, ಈ ಹೆಜ್ಜೆಯಿಂದ ಬೇರೆಯವರು ಕೂಡ ಏನೋ ಒಂದು ಆಶಾಕಿರಣವನ್ನು, ಒಂದು ಪ್ರಯೋಜನದ ಸಾಧ್ಯತೆಯನ್ನು ಕಾಣುತ್ತಿದ್ದಾರೆಂದ ಮೇಲೆ, (ಇದನ್ನೂ ಇವರೇ ಹೇಳಿದ್ದು) ಆ ಬೇರೆಯವರಿಗಾಗಿಯಾದರೂ ನಾವು ಈ ದೌರ್ಜನ್ಯವನ್ನು ಎಷ್ಟೇ ಕಷ್ಟವಾದರೂ, ಜೀವದ ಹಂಗು ತೊರೆದಾದರೂ ಸರಿ, ಎದುರಿಸಿ ನಿಲ್ಲಲೇ ಬೇಕಾಗಿದೆ. ಹೀಗೆ ಇದು ನಮ್ಮೊಬ್ಬರ ಪ್ರಶ್ನೆಯಾಗಿರದೆ ಬೇರೆಯವರಿಗೂ ಸಂಬಂಧಪಟ್ಟಿದ್ದು ಎಂದು ಖಚಿತವಾದುದರಿಂದಲೇ ಅದನ್ನು ನಿಮ್ಮ ಮುಂದೆ ಚರ್ಚೆಗೆ ಒಡ್ಡುತ್ತಿರುವುದು.

('ಜೀವದ ಹಂಗು ತೊರೆದಾದರೂ' ಎಂಬುದು ಉತ್ಪ್ರೇಕ್ಷೆಯಲ್ಲ. ಮೇ 17 ರಂದು, "... ನಾಗರಾಜ, ವಿಠಲ ಹೆಗ್ಡೆ ಅವತ್ತು ಹರಡಗೋಡಿಗೆ ಬರಬೇಕಿತ್ತು. ಮಜ ಇರುತ್ತಿತ್ತು. ಸ್ವಾಮಿಗಳಿಗೂ ಒಂದಷ್ಟು ಜನ ಬೆಂಬಲಿಗರಿದ್ದರು...." ಎಂದು ಮೇಲ್ಕಂಡ ಮುಖಂಡ ಹೇಳಿದ. ವಿಠಲ್ ಮಧ್ಯಾಹ್ನ 12 ರವರೆಗೂ ಅಲ್ಲೇ ಇದ್ದು, ಗುರುಗಳು ಬರುವುದಿಲ್ಲವೆಂದು ಖಾತ್ರಿಯಾದ ಮೇಲೆ ಶೃಂಗೇರಿಗೆ ಬಂದರು. ಅನಂತರ ಕಾರಿನಲ್ಲಿ ಜೊತೆಗಾರರೊಂದಿಗೆ ಬಂದ ಕಾರ್ಗಿನಬೈಲು ಮಂಜಪ್ಪ ನಾಯ್ಕ್, "ಅಲ್ಲಿಗೆ ಬಾ, ಜನ ಕಾಯುತ್ತಿದ್ದಾರೆ, ಉತ್ತರ ಹೇಳು" ಎಂದು ಸೂಚ್ಯವಾಗಿ ಬೆದರಿಸುತ್ತ, ಅವರನ್ನು ಹಂಗಿಸಿ ಕರೆದೊಯ್ಯಲು ನೋಡಿದರು. "ನಾನು 12 ರವರೆಗೂ ಅಲ್ಲಿ ಇದ್ದೇ ಈ ಕಡೆ ಬಂದದ್ದು. ಪ್ರಶ್ನೆ ಕೇಳುವವರಿದ್ದರೆ ಕೇಳಬಹುದಿತ್ತು. ಈಗ ಬೇಕಿದ್ದರೆ ಇಲ್ಲೇ ಬನ್ನಿ. ಉತ್ತರ ಹೇಳುವ ತಾಕತ್ತಿದೆ" ಎಂದು ವಿಠಲ್ ಮೂದಲಿಸಿ ಕಳಿಸಬೇಕಾಯ್ತು.)

ಅಂತರ್ಜಾತಿ ವಿವಾಹ ಚಾಲ್ತಿಗೆ ಬರಕೂಡದು ಎಂಬುದಕ್ಕಾಗಿ, ನೈತಿಕತೆ, ಅತಃಕರಣ, ಕಾನೂನು–ಈ ಎಲ್ಲದರ ಎಲ್ಲ ಎಲ್ಲೆಕಟ್ಟುಗಳನ್ನೂ ಮೀರಿ ಹೀಗೆ ಏನು ಬೇಕಾದರೂ ಮಾಡುತ್ತಾರಲ್ಲ, ಅದರ ಬದಲು ಇವರುಗಳು ತಮ್ಮ ಈ ಶಕ್ತಿಯನ್ನು ತಮ್ಮ ಇಡೀ ಸಮೂಹದ ಹಿತದ ಕಡೆಗಾದರೂ ಯಾಕೆ ತಿರುಗಿಸಬಾರದು? ಕಡೇ ಪಕ್ಷ ತಮ್ಮ ಜಾತಿಯೊಳಗೆ ಯಾರೂ ವರದಕ್ಷಿಣೆ ತೆಗೆದುಕೊಳ್ಳಬಾರದು ಎಂಬ ಒಂದೇ ಒಂದು ಶಾಸ್ತ್ರ–ನಿಯಮವನ್ನಾದರೂ ಮಾಡಿ ಜಾರಿಗೆ ತರಲು ಇವರು ಯಾಕೆ ಮನಸ್ಸು ಕೊಡುವುದಿಲ್ಲ?

ಮೂವತ್ತು, ಮೂವತ್ತೈದು ವರ್ಷಗಳಾದರೂ ಹೆಣ್ಣು ಮಕ್ಕಳು ಮದುವೆಯಾಗದೆ ಕೊಳೆಯುತ್ತಾರಲ್ಲ, ಅವರ ವಿಮೋಚನೆಗೆ, ಅವರಿಗೆ ಕನಿಷ್ಟವಾದ ಒಂದು ಸಹಜ ಬದುಕನ್ನಾದರೂ ದೊರಕಿಸಲು ಇವರು ಏನು ಶಾಸ್ತ್ರ ನಿಯಮ ಜಾರಿಗೆ ತಂದಿದ್ದಾರೆ? ಮದುವೆಯ ವಯಸ್ಸು ಮೀರಿದ ಹೆಣ್ಣು ಮಕ್ಕಳನ್ನು ಮನೆಯಲ್ಲಿ ಇಟ್ಟುಕೊಳ್ಳುವುದನ್ನು ಕೂಡ ಧರ್ಮಶಾಸ್ತ್ರ ನಿಷೇಧಿಸುತ್ತಲ್ಲ, ಅದಕ್ಕೆ ಇವರು ಕೊಡುವ ಪರಿಹಾರ ಏನು—'ಮದುವೆಯ ಪ್ರಾಯ ಮೀರಿದ ಎಲ್ಲ ಹೆಣ್ಣು ಮಕ್ಕಳನ್ನೂ ಬಹಿಷ್ಕರಿಸಿ ಕಾಡಿಗಟ್ಟುವುದೆ?

ಸಂದರ್ಶನದಲ್ಲಿ, ತಾನು ಇಕ್ಕಟ್ಟಿಗೆ ಸಿಕ್ಕಿಕೊಂಡಾಗಲೆಲ್ಲ "ನನಗೆ 67 ವರ್ಷ ಆಯಿತು. ನೀವು ವೃಥಾ ಹೀಗೆಲ್ಲ ನನಗೆ ತೊಂದರೆ ಕೊಡುತ್ತಿದ್ದೀರಿ...." ಮುಂತಾದ 'ಅಸ್ತ್ರ'ಗಳನ್ನು ಉಪಯೋಗಿಸಿ ನಮ್ಮ ಬಾಯಿ ಮುಚ್ಚಿಸಲು ನೋಡುತ್ತಿದ್ದ ಗುರುಗಳು, ತಾನು ತನ್ನ ಶಿಷ್ಯಗಣದ ಮೂಲಕ ಗುದ್ದಿ ಹಣ್ಣು ಮಾಡಿ, ಮೂಗು ಒತ್ತಿ, ಬಾಯಿ ತೆರೆಸಿ ಪಂಚಗವ್ಯ ಕುಡಿಸಿರುವುದು ಕೂಡ ಅಂಥದೇ ಒಬ್ಬ ವ್ಯಕ್ತಿಗೆ; ಬಡತನ, ಚಿಂತೆ, ಕಷ್ಟ-ಕಾರ್ಪಣ್ಯಗಳಿಂದ ಜರ್ಝರಿತರಾದ 65 ವರ್ಷ ದಾಟಿದ ಒಬ್ಬ ವೃದ್ಧರಿಗೆ-ಎಂಬುದನ್ನು ಸ್ವಲ್ಪ ಯೋಚಿಸುತ್ತಾರೆಯೆ?

ಆದರೆ, ಮೇಲೆ ಹೇಳಿದಂಥ ರಚನಾತ್ಮಕ ಕೆಲಸಕ್ಕೆಲ್ಲ ಇವರಿಗೆ ಎಲ್ಲಿ ಪುರಸೊತ್ತು? ಚೆಂದವಾಗಿದ್ದ ಮನೆಗಳನ್ನು ಮುರಿದು ದಿಕ್ಕಾಪಾಲಾಗಿಸಿ ದೋಚಿಕೊಳ್ಳುವುದು; ತಮ್ಮದೇ ಜಾತಿಯ ವಿಧವೆಯರ, ಅನಾಥ ಮಕ್ಕಳ ಆಸ್ತಿ–ಪಾಸ್ತಿಗಳನ್ನು ಕಬಳಿಸಿ 'ಅನುಕೂಲಸ್ಥ'ರಾಗುವುದು; ಹೇಗೋ ಕಷ್ಟದಲ್ಲಿ ನಡೆಯುವ ಮದುವೆಗಳನ್ನು ಸಹ ಬೇನಾಮಿ ಪತ್ರಗಳನ್ನು ಬರೆದಾದರೂ ಮುರಿಯಲು ಹವಣಿಸುವುದು; ಊರ ದನ ಕಾಯುವ ಉಸಾಬರಿಯಲ್ಲಿ ಮನೆಯ ಕುರಿಗಳನ್ನು ತೋಳನ ಬಾಯಿಗೆ ಬಲಿಕೊಡುವುದು; 'ಬ್ಲಾಕ್ ಮೇಲ್' ಮಾಡಿಯಾದರೂ ಪ್ರಭಾವಿಯೆನ್ನಿಸಿಕೊಳ್ಳುವುದು; ಇಸ್ಪೀಟು, ಹೆಂಡ, ಸೂಳೆಗಾರಿಕೆಗಳೇ ಜೀವನವಾಗಿ ಮನೆಯಲ್ಲಿ ವೃದ್ಧ ತಂದೆ–ತಾಯಿಗಳಿಗೂ, ಕಟ್ಟಿಕೊಂಡ–ಹುಟ್ಟಿಕೊಂಡವರಿಗೂ ನಾಯಿ ಬಾಳಾಗಿಸುವುದು; ಮನೆಯಲ್ಲಿ ಕೂಲಿ ಹೆಣ್ಣುಗಳ ಮಾನ–ಪ್ರಾಣಗಳ ಜೊತೆ ಚೆಲ್ಲಾಟವಾಡುವುದು; ತಮ್ಮ ಬಾಹ್ಯ–ಅಂತರಂಗಗಳಲ್ಲೆಲ್ಲ ಅಶುದ್ಧಿಯೇ ತಾಂಡವವಾಡುತ್ತಿದ್ದರೂ ಬೇರೆಯವರನ್ನು 'ಶುದ್ಧೀಕರಿಸುವುದು'....ದಿನವಹಿ ಆಗಬೇಕಾಗಿರುವ ಕಲ್ಯಾಣ ಕಾರ್ಯಗಳು ಒಂದೇ, ಎರಡೇ!?

* * *

ಸ್ವಾಮಿ ವಿವೇಕಾನಂದರು ನಮ್ಮ ದೇಶದಲ್ಲಿ ಮದುವೆಯ ಪರಿಸ್ಥಿತಿ ಬಗ್ಗೆ ಹೀಗೆ ಹೇಳುತ್ತಾರೆ– "ಸಣ್ಣ ಸಣ್ಣ ಜಾತಿಗಳೊಳಗೇ ಮದುವೆಯಾಗಬೇಕಾದ ಕಡ್ಡಾಯದಿಂದಾಗಿ ವಧೂ–ವರರಿಗೆ ಅನುರೂಪ ಜೋಡಿಯ ಆಯ್ಕೆಗೆ ಅವಕಾಶ ಬಹಳ ಕಿರಿದಾಗಿದೆ. ಅಲ್ಲದೆ, ಇದರಿಂದಾಗಿ, ವಂಶಪಾರಂಪರ್ಯವಾಗಿ ಕುಟುಂಬದ ಒಳಗೊಳಗೇ ರಕ್ತ ಹರಿಯುವುದರಿಂದ, ಎಲ್ಲಾ ತರದ ರೋಗ–ರುಜಿನಗಳಿಗೆ ಸುಲಭವಾಗಿ ಬಲಿಯಾಗಬಲ್ಲ ಅತ್ಯಂತ ನಿಃಶಕ್ತವಾದ, ನಿರ್ವೀರ್ಯವಾದ ಒಂದು ಜನಾಂಗ ನಾವಾಗುತ್ತಿದ್ದೇವೆ. ಈ ಮದುವೆಯ ವೃತ್ತವನ್ನು ವಿಶಾಲವಾಗಿ ಮಾಡುವುದರ ಮೂಲಕ ಮಾತ್ರ ನಾವು ಹೊಸ ರಕ್ತವನ್ನು ಸಂತಾನಕ್ಕೆ ತುಂಬಬಹುದು. ಇದನ್ನು ನಿರಾಕರಿಸುವಷ್ಟು ದಡ್ಡರು ಯಾರಿದ್ದಾರೆ? ಭರತ ಖಂಡಕ್ಕೆ ಅಂತರ್ಜಾತಿ ವಿವಾಹ ಪದ್ಧತಿ ಆವಶ್ಯಕ."

ಹೀಗೆ ಅಂತರ್ಜಾತಿ ವಿವಾಹ ಇಡೀ ದೇಶಕ್ಕೆ ಅನ್ವಯಿಸುವ ಬಹಳ ಮುಖ್ಯವಾದ ಈ ಎರಡು ಲಾಭಗಳನ್ನು ಉಂಟುಮಾಡುವುದನ್ನು ವಿವೇಕಾನಂದರಂಥವರೂ ಸಹ ಪ್ರತಿಪಾದಿಸಿದ್ದರೂ, ಅನಾಗರಿಕ ಮತ್ತು ಅಮಾನುಷ ಮಟ್ಟಕ್ಕಾದರೂ ಇಳಿದು ಅದನ್ನು ಹತ್ತಿಕ್ಕಬಯಸುವ ಈ 'ಜಾತಿ ಶ್ರೇಷ್ಠ' ಮುಖಂಡರುಗಳ ಉದ್ದೇಶ ಯಾವ ಜನಾಂಗಕ್ಕಾದರೂ, ಯಾವ ಕಾಲಕ್ಕಾದರೂ ಕಲ್ಯಾಣಕಾರಿಯೆ?

—ಎಲ್ಲ ಓದುಗರೂ ಆವೇಶವಿಲ್ಲದೆ ಚಿಂತಿಸ ಬೇಕಾದ ವಿಚಾರ ಇದು.

—ಸಿರಿಮನೆ ನಾಗರಾಜ್.

ಸುನಂದ–ಸಿದ್ದುಸ್ವಾಮಿಯ ವಿವಾಹಕ್ಕೆ ಮುಖ್ಯ ಅತಿಥಿಗಳಾಗಿದ್ದವರಲ್ಲಿ ಕಿರಕೋಡು ಸೀತಾರಾಮಭಟ್ಟರೂ ಒಬ್ಬರು. ಸಂಸ್ಕೃತದ ಒಬ್ಬ ದೊಡ್ಡ ವಿದ್ವಾಂಸರೂ, ವೈದಿಕ ಮನೆತನದವರೂ ಆಗಿಯೂ ಕೂಡ ಅವರು ಪೊಳ್ಳು ಧಾರ್ಮಿಕತೆ, ಅವೈಚಾರಿಕ ನಂಬಿಕೆ ಮತ್ತು ಆಚರಣೆಗಳನ್ನಿಟ್ಟುಕೊಳ್ಳದೆ, ಕೈ, ಬಾಯಿ, ಮನಸ್ಸುಗಳೆಲ್ಲದರಲ್ಲೂ ಪರಿಶುದ್ಧರಾಗಿರುವವರು.

ಅವರನ್ನು, ಹಲವು ಜನ ಕಟ್ಟಾ ಬ್ರಾಹ್ಮಣರೆಂದುಕೊಳ್ಳುವ ದೊಡ್ಡ ಮನುಷ್ಯರುಗಳು "ನೀವೂ ಹೋಗಿದ್ದಿರಂತೆ, ನಿಜವಾ?" ಎಂದು ಕೇಳಿದರಂತೆ. ಅವರು ಯಾವ ಮುಚ್ಚುಮರೆಯಿಲ್ಲದೆ "ಹೌದು, ಬಹಳ ಒಳ್ಳೆಯ ಕಾರ್ಯಕ್ರಮ....." ಎಂದರಂತೆ.

ಅನಂತರ ಸರ್ಕಾರದ 18% ಸೌಲಭ್ಯಗಳ ವಿತರಣೆಯ ಸಮಾರಂಭವೊಂದರಲ್ಲಿ ಈ ವಿವಾಹವನ್ನು ಪ್ರಸ್ತಾಪಿಸುತ್ತ ಅವರು, "ಸಮಾನತೆ ಎಂಬುದರಲ್ಲಿ ಎರಡು ರೀತಿ ಇದೆ— ಮೇಲಿದ್ದವರನ್ನು ಕೆಳಕ್ಕೆಳೆದು, 'ನಾನೂ–ನೀನೂ ಸಮಾನ' ಎನ್ನುವುದೊಂದು ಬಗೆ; ತಾನು ಕೆಳಗೆ ಎಂದುಕೊಳ್ಳುವವರನ್ನು ನಮ್ಮ ಪಕ್ಕಕ್ಕೆ ಕರೆದುಕೊಂಡು 'ನಾನೂ–ನೀನೂ ಸಮಾನ' ಎನ್ನುವುದು ಇನ್ನೊಂದು. ಈ ಮದುವೆ ಈ ಎರಡನೇ ಬಗೆಯದು" ಎಂದು, ಸಮಾನತೆಯ ಬದುಕಿಗೆ ಇದೊಂದು ಮಾದರಿ ಎಂದು ಮುಕ್ತ ಕಂಠದಿಂದ ಶ್ಲಾಘಿಸಿದರಂತೆ.

ಪತ್ರಗಳು

ಏಲಕ್ಕಿ ಮತ್ತು ಮೆಣಸಿನ ವ್ಯಾಪಾರ

ಮಾನ್ಯರೆ,

ನಮ್ಮ ಸಂಘವು ಮಲೆನಾಡಿನ ಬೆಳೆಗಾರರ ಅನುಕೂಲಕ್ಕಾಗಿ ಶಿವಮೊಗ್ಗೆಯಲ್ಲಿ ಏಲಕ್ಕಿ ಮತ್ತು ಮೆಣಸಿನ ವ್ಯಾಪಾರಕ್ಕೆ ವ್ಯವಸ್ಥೆ ಮಾಡಿದ್ದು, ಖರೀದಿದಾರರು ಶಿವಮೊಗ್ಗೆಯಲ್ಲಿ ಇರುವವರಾಗಿರದೆ ಬೇರೆ ಕಡೆಯಿಂದ ವ್ಯಾಪಾರದ ದಿನಗಳಂದು ಬರುತ್ತಾರೆ.

ವ್ಯಾಪಾರದ ದಿನವನ್ನು ಸಂಸ್ಥೆಯು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದು, ಆ ದಿನವಂದೇ ಅನೇಕ ಬೆಳೆಗಾರರು ತಮ್ಮ ಫಸಲಿನೊಂದಿಗೆ ಬರುತ್ತಾರೆ. ಕೆಲವೊಮ್ಮೆ ಕಡಿಮೆ ಪ್ರಮಾಣವಲ್ಲಿ ಫಸಲು ವ್ಯಾಪಾರಕ್ಕೆ ಬೀಳುವುದುಂಟು. ಇದರಿಂದಾಗಿ ಖರೀದಿಗೆ ಸಾಕಷ್ಟು ಮಾಲು ಇಲ್ಲದೇ ಇರುವುದರಿಂದ ಖರೀದಿದಾರರು ಅಸಮಾಧಾನಗೊಂಡಿದ್ದಾರೆ ಇನ್ನು ಕೆಲವೊಮ್ಮೆ ಬಹಳ ಜನ ವ್ಯಾಪಾರಸ್ಥರು ಬರದಿದ್ದಾಗ ದೊಡ್ಡ ಪ್ರಮಾಣದಲ್ಲಿ ಫಸಲು ಮಾರಾಟಕ್ಕೆ ಬೀಳುವುದುಂಟು.

ಇಂಥ ಅನಿರ್ದಿಷ್ಟ ಪರಿಸ್ಥಿತಿಯಿಂದ ಬೆಳೆಗಾರರ ಫಸಲಿಗೆ ಯೋಗ್ಯ ಬೆಲೆ ದೊರಕಿಸಿಕೊಡಲು ಅನನುಕೂಲವಾಗುತ್ತಿದೆ. ಈ ಕಾರಣಕ್ಕಾಗಿ ಏಲಕ್ಕಿ, ಮೆಣಸು ಬೆಳೆಗಾರರು, **ನಮ್ಮ ನಿಗದಿತ ವ್ಯಾಪಾರದ ದಿನಕ್ಕೆ ಕನಿಷ್ಟ 10 ದಿನ ಮೊದಲು,** ಫಸಲನ್ನು ಸಂಘಕ್ಕೆ ತಂದು ಕೊಟ್ಟ ವ್ಯಾಪಾರದ ಬಗ್ಗೆ ನಿರ್ದಿಷ್ಟ ಅಭಿಪ್ರಾಯವನ್ನು ಕೊಟ್ಟಲ್ಲಿ, ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಪಾರಸ್ಥರನ್ನು ಕರೆಸಿ ಫಸಲಿಗೆ ಯೋಗ್ಯ ಬೆಲೆ ದೊರಕಿಸಿ ಕೊಡಲು ಅನುಕೂಲವಾಗುತ್ತದೆ ಈ ವಿಚಾರದಲ್ಲಿ ಬೆಳೆಗಾರರು ಸಹಕರಿಸಬೇಕಾಗಿ ಕೋರಿದೆ.

ಒಂದು ವೇಳೆ, 10 ದಿನ ಮೊದಲು ನಿರ್ದಿಷ್ಟ ಮಾಹಿತಿ ದೊರೆಯದಿದ್ದಲ್ಲಿ, ಅವರ ಫಸಲನ್ನು ವ್ಯಾಪಾರಕ್ಕೆ ಹಾಕಲು ಅನನುಕೂಲವಾಗಬಹುದೆಂಬ ವಿಷಯವನ್ನು ಬೆಳೆಗಾರರ ಗಮನಕ್ಕೆ ತರಬಯಸುತ್ತೇವೆ.

ಎಸ್ ಕೃಷ್ಣರಾವ್,
ಕಾರ್ಯದರ್ಶಿ,
'ಮ್ಯಾಮ್‌ಕೋಸ್', ಶಿವಮೊಗ್ಗ.

ವಿದ್ಯಾ ಮಹಿಳಾ ಸಮಾಜದ ಅಧ್ಯಕ್ಷಿಣಿಯಾಗಿದ್ದ

ಶ್ರೀಮತಿ ವಾಣಿಯವರಿಗೆ ಶ್ರದ್ಧಾಂಜಲಿ

ಮಾನ್ಯರೆ,

ಕೊಪ್ಪದ ವಿದ್ಯಾ ಮಹಿಳಾ ಸಮಾಜದ ಆರಂಭದಿಂದಲೂ ಸಮಾಜದ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿದ್ದು, ಕಳೆದ ಸುಮಾರು 3 ವರ್ಷದಿಂದ ಸಮಾಜದ ಅಧ್ಯಕ್ಷಿಣಿಯಾಗಿದ್ದ ಶ್ರೀಮತಿ ವಾಣಿ ಎನ್. ರಾವ್ ರವರು ದಿ: 1-6-87 ರಂದು ನಮ್ಮನ್ನೆಲ್ಲ ಅಗಲಿ ಹೋಗಿದ್ದಾರೆ.

ಎಲೆಮರೆಯ ಕಾಯಿಯಂತೆ ಇದ್ದುಕೊಂಡೇ ಇವರು ಸಮಾಜದ ಹಾಗೂ ಚೇತನ ಯುವತಿ ಮಂಡಳಿಯ ಎಲ್ಲಾ ಆಗು-ಹೋಗುಗಳಲ್ಲಿ ಸಕ್ರಿಯರಾಗಿದ್ದರು. ಸಮಾಜದ ಹಾಗೂ ಯುವತಿ ಮಂಡಳಿಯ ಕೀರ್ತಿ ರಾಜ್ಯ ಮಟ್ಟದವರೆಗೂ ಮುಟ್ಟುವಂತೆ ಮಾಡುವಲ್ಲಿ, ಅವರು ನೀಡಿದ ಕೊಡುಗೆ ಅಪಾರ.

ಇಂಥ ನಿಷ್ಕಾಮವಂತ ಸಮಾಜ ಸೇವಕಿಯನ್ನು ಕಳೆದುಕೊಂಡ ವಿದ್ಯಾ ಮಹಿಳಾ ಸಮಾಜ ತನ್ನ ಒಂದು ಪ್ರಮುಖ ಆಧಾರ ಸ್ತಂಭವನ್ನೇ ಕಳೆದುಕೊಂಡಂತಾಗಿದೆ. ದಿವಂಗತರ ಆತ್ಮಕ್ಕೆ ಶಾಂತಿಯನ್ನು ಬಯಸುವ,

ಸದಸ್ಯರು,
ವಿದ್ಯಾ ಮಹಿಳಾ ಸಮಾಜ ಮತ್ತು
ಚೇತನ ಯುವತಿ ಮಂಡಳಿ
ಬಾಳಗಡಿ, ಕೊಪ್ಪ

ರೈತಾಧ್ಯಕ್ಷ 'ಬಾಸುತಿ'

(2ನೇ ಪುಟದಿಂದ)

ಯೋ, ಆದರ ಹತ್ತು ಪಟ್ಟು ಸಮಸ್ಯೆಗಳು ಈ ಮಂಡಲದಲ್ಲಿವೆ. ಅತಿಯಾದ ಸಮಸ್ಯೆ ಕುಡಿಯುವ ನೀರು ! ನೀರು ಕುಡಿದು ಜೀವ ಉಳಿಸಿಕೊಂಡ ನಂತರ ಯೋಚಿಸುವ ಸಮಸ್ಯೆ.... ಗ್ರಾಮಾಭಿವೃದ್ಧಿಯಾಗಬೇಕಾದರೆ ಗ್ರಾಮಗಳಲ್ಲಿ ವಿದ್ಯೆಯ ಪ್ರಗತಿಯಾಗಬೇಕು; ಈ ಮಂಡಲದಲ್ಲಿರಲಿ, ಮಂಡಲದ ಆಜು ಬಾಜಿನ 14-15 ಮೈಲಿಯಲ್ಲೆಲ್ಲೂ ಒಂದು ಪ್ರೌಢಶಾಲೆಯ ಸುಳಿವು ಸಹ ಕಾಣಿಸದಿರುವುದು ಬ್ರಿಟಿಷರ ಕಾಲವನ್ನೇ ನೆನಪಿಸುವ ಒಂದು ಸಾಕ್ಷಿ ಕಲ್ಲು.

ಬಡವರ ಹೆಸರಿನ ಮನೆಗಳಿಗೆ ಬಾಡಿಗೆ ಪಡೆದುಕೊಳ್ಳುವ ಪುಢಾರಿಗಳ ಹೊಸ ಸಮಸ್ಯೆಯ ಜೊತೆಗೆ ಅಪ್ಪ-ಅಜ್ಜಂದಿರ ಕಾಲದವೇ ಹಲವು ಹತ್ತು ಸಮಸ್ಯೆಗಳು ಈ ಮಂಡಲದಲ್ಲಿ ಕೈ ಬೀಸಿ ಕರೆದು ತೋರಿಸುತ್ತಿವೆ.

ಪೊರೆ ಬಿಟ್ಟ ಹಾವಿನಂತೆ ಚುರುಕಿನಿಂದ ಪ್ರಗತಿಗೆ ಸೆಣೆಸಿದರೆ ರೈತ ಸಂಘದ ವ್ಯಕ್ತಿ ಇಲ್ಲಿ ಒಂದು ಹೊಸ ಶಕ್ತಿಯಾಗಿ ಮಾರ್ಪಡುವುದು ಕಷ್ಟವೇನಲ್ಲ. ತನ್ಮೂಲ್ಲ ಪ್ರಗತಿ ಕಾರ್ಯಕ್ಕೆ ಶುಭ ಹಾರೈಸುತ್ತೇವೆ

ಎಂ. ಐ ಶ್ರೀನಿವಾಸಮೂರ್ತಿ
ಮೂಡುಬಾಗಿಲು.

ಪ್ರೀತಿ-ವರದಕ್ಷಿಣೆ-ವಂಚನೆ

(2ನೇ ಪುಟದಿಂದ)

ದ್ದಾ, ಪೋಲೀಸರು ಹುಡುಕುತ್ತಿದ್ದಾರೆ.

ಸಿದ್ದೇಗೌಡನನ್ನು 2ನೇ ಮದುವೆಯ ಬಗ್ಗೆ ಕಾಂಗ್ರೆಸವರೂ ಮೊದಲ ವಧುವಿನ ಕಡೆಯವರನ್ನು ಜನತಾದವರೂ ಬೆಂಬಲಿಸಿರುವರೆನ್ನಲಾಗಿದ್ದು, ಹೀಗೆ ಮಾನವೀಯ ಸಮಸ್ಯೆಯೊಂದು ರಾಜಕೀಯ ಕುರೂಪ ಪಡೆದು, ತಪ್ಪಿತಸ್ಥರು ಬಚಾವಾಗುವ ಭಯ ವಿರುವುದಾಗಿ ವರದಿಯಾಗಿದೆ

ಸಾಂII ಕಾರ್ಯಕ್ರಮ ನೀಡಲು ಸ್ಥಳೀಯ ಕಲಾವಿದರಿಗೆ ಕರೆ

ಚಿಕ್ಕಮಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 1987-88ನೇ ಸಾಲಿನಲ್ಲಿ ಸಂಸ್ಕೃತಿ-ಸುದಿನದ ಅಂಗವಾಗಿ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಜಿಲ್ಲೆಯ ಕಲಾವಿದರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶವನ್ನು ಕಲ್ಪಿಸುತ್ತಿದೆ ಇದರಲ್ಲಿ ನಾಟಕ, ಭರತನಾಟ್ಯ, ಜಾನಪದ ಕಾರ್ಯಕ್ರಮಗಳು ಹಾಗೂ ಶಾಸ್ತ್ರೀಯ ಸಂಗೀತಗಳಿಗೆ ಅವಕಾಶವಿದೆ

ಕಾರ್ಯಕ್ರಮ ನೀಡಲು ಇಚ್ಛಿಸುವ ಕಲಾವಿದರು ನಿಗದಿತ ಅರ್ಜಿ-ನಮೂನೆಯನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರಧಾನ ಕೃಷಿ ಅಧಿಕಾರಿಗಳ ಕಛೇರಿ ಕಟ್ಟಡ, ಹನುಮಂತಪ್ಪ ಸರ್ಕಲ್ ಹತ್ತಿರ, ಚಿಕ್ಕಮಗಳೂರು ಇವರಿಂದ ಪಡೆದು, ವಿವರಗಳನ್ನು ಭರ್ತಿ ಮಾಡಿ, ದಿ: 15 6.87ರೊಳಗೆ ಅದೇ ಕಚೇರಿಗೆ ನೀಡಬೇಕಾಗಿ ಕೋರಲಾದೆ.

ಕುಟುಂಬಯೋಜನೆ ಲಾಟರಿ : ಶೃಂಗೇರಿಗೆ ಮೊದಲ ಬಹುಮಾನ

ಶೃಂಗೇರಿ: ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪ್ರೋತ್ಸಾಹಕವಾಗಿ ನಡೆಸಲ್ಪಡುತ್ತಿರುವ ಅದೃಷ್ಟ ಬಹುಮಾನ ಯೋಜನೆಯ ಏಪ್ರಿಲ್ ತಿಂಗಳ ಪ್ರಥಮ ಬಹುಮಾನ ಈ ತಾಲ್ಲೂಕಿಗೆ ಬಂದಿದೆ.

ಇಲ್ಲಿನ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಏಪ್ರಿಲ್ ತಿಂಗಳಲ್ಲಿ ಉದರ ದರ್ಶಕ ಸಂತಾನ ಪ್ರತಿಬಂಧಕ ಚಿಕಿತ್ಸೆ ಮಾಡಿಸಿ ಕೊಂಡಿರುವ ಹೊಸಕೊಪ್ಪದ ಶ್ರೀಮತಿ ನಾಗರತ್ನ 3,000 ರೂ.ಗಳ ಈ ಬಹುಮಾನ ಪಡೆದಿದ್ದಾರೆ,

ಈ ಯೋಜನೆಗಳ ಸದುಪಯೋಗವನ್ನು ಅರ್ಹ ದಂಪತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಡೆದುಕೊಳ್ಳುವಂತೆ ವೈದ್ಯಾಧಿಕಾರಿಗಳು ಕೋರಿದ್ದಾರೆ.

ಆಗಸ್ಟ್‌ನಲ್ಲಿ ಮುಖ್ಯ ಮಂತ್ರಿಗಳಿಂದ ಬೆಳಗಾವಿಯಲ್ಲಿ

'ಜನತೆ-ಸರ್ಕಾರ: ಪ್ರಶ್ನೆ-ಉತ್ತರ' ಕಾರ್ಯಕ್ರಮ

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಆಗಸ್ಟ್ ತಿಂಗಳಲ್ಲಿ ಮೇಲ್ಕಂಡ ಕಾರ್ಯಕ್ರಮವನ್ನು ಬೆಳಗಾವಿಯಲ್ಲಿ ನಡೆಸಿಕೊಡುವರು. ಈ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸಾರ್ವಜನಿಕರು ಪ್ರಶ್ನೆಗಳನ್ನು ಕಳುಹಿಸಿಕೊಡಲು ಅವಕಾಶವಿದೆ. ಸಾರ್ವಜನಿಕರಿಂದ ಬಂದ ಪ್ರಶ್ನೆಗಳಲ್ಲಿ ಎಲ್ಲಾ ಜಿಲ್ಲೆಗಳಿಗೂ ಪ್ರಾತಿನಿಧ್ಯ ನೀಡಿ ಸುಮಾರು 30 ಪ್ರಶ್ನೆಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಗೊಂಡ ಪ್ರಶ್ನೆಗಳಿಗೆ ಮುಖ್ಯ ಮಂತ್ರಿಯವರು ನೇರವಾಗಿ ಉತ್ತರ ನೀಡುವರು.

ಪ್ರಶ್ನೆಗಳನ್ನು ಕಳುಹಿಸಲು ಇಚ್ಛಿಸುವವರು ತಮ್ಮ ಪ್ರಶ್ನೆಗಳನ್ನು ದಿ: 20-6-87 ರೊಳಗೆ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ನಂ. 5. ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001 ಈ ವಿಳಾಸಕ್ಕೆ ಕಳುಹಿಸಬೇಕು. ಪ್ರಶ್ನೆ ಕೇಳುವವರು ತಮ್ಮ ಪೂರ್ಣ ವಿಳಾಸ ನೀಡಬೇಕು ಮತ್ತು ಚಿಕ್ಕ ಹಾಗೂ ನೇರ ಪ್ರಶ್ನೆಗಳನ್ನು ಕೇಳಬೇಕು.

ಆಯ್ಕೆಗೊಂಡ ಪ್ರಶ್ನೆಗಳನ್ನು ಕಳುಹಿಸಿದ ಸಾರ್ವಜನಿಕರನ್ನು ವಾರ್ತಾ ಇಲಾಖೆ ವೆಚ್ಚದಲ್ಲಿ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಆಹ್ವಾನಿಸಲಾಗುವುದು. ಕಾರ್ಯಕ್ರಮ ನಡೆಯುವ ಸ್ಥಳ, ದಿನಾಂಕ ಮತ್ತು ವೇಳೆಯನ್ನು ಪ್ರಶ್ನೆದಾರರಿಗೆ ಮುಂಚಿತವಾಗಿ ತಿಳಿಸಲಾಗುವುದು.

ಏಲಕ್ಕಿ ಬೆಳೆಗಾರರಿಗೆ ರಿಯಾಯಿತಿ ದರದಲ್ಲಿ ಮೈಲುತುತ್ತದ ಮಾರಾಟ

ಕೊಪ್ಪ: ಏಲಕ್ಕಿ ತೋಟಗಳಲ್ಲಿ ಮಳೆಗಾಲದಲ್ಲಿ ಕಾಣಿಸಿಕೊಳ್ಳುವ ಕೊಳೆರೋಗದ ಹತೋಟಿಗಾಗಿ 'ಶೇ. 1ರ ಬೋರ್ಡೋ ಮಿಶ್ರಣ'ವನ್ನು ಗಿಡಗಳಿಗೆ ಸಿಂಪಡಿಸಲು. ಸಂಬಾರ ಮಂಡಳಿಯು 10 ಎಕರೆಗಿಂತ ಕಡಿಮೆ ಇರುವ ಏಲಕ್ಕಿ ಬೆಳೆಗಾರರಿಗೆ, ಶೇ. 25ರ ದರದಲ್ಲಿ ಮೈಲುತುತ್ತವನ್ನು ಸರಬರಾಜು ಮಾಡಲಿದೆ. ನಿಯಮಿತ ಅರ್ಜಿ ಫಾರಂಗಳಿಗೆ ಮತ್ತು ಹೆಚ್ಚಿನ ವಿವರಗಳಿಗೆ ಹತ್ತಿರದ ಸಂಬಾರ ಮಂಡಳಿಯ ಕ್ಷೇತ್ರ ಕಛೇರಿಗಳನ್ನು 10-6-87 ರೊಳಗೆ ಸಂಪರ್ಕಿಸಬೇಕು.

ಶಿವಮೊಗ್ಗ ಅಡಿಕೆ ಧಾರಣೆ

ತಾ|| 28.5.1987

ಸರಕು : 4959 – 5310
ಬೆಟ್ಟೆ : 3200 – 3659
ಗೊರಬಲು: 900 – 1100

ಸಾಗರ ಅಡಿಕೆ ತಾ|| 3.6.1987

ಇಡಿ ಅಡಿಕೆ ರೂ. 1769–1989
ಆಪಿ ರೂ. 3992–4514
ಚಾಲಿ ರೂ. 1249–1419
ಸಿಪ್ಪೆ ಗೋಟು ರೂ. 591–749
ಮೆಣಸು ರೂ. 5169–5569

ಎಸ್ಸೆಸ್ಸೆಲ್ಸಿಯ ಫಲಿತಾಂಶಗಳು

ಮೇಲ್ಪಾಲು: 0ಯಿಂದ 39ಕ್ಕೆ

ನಾಲ್ಕು ವರ್ಷದ ಹಿಂದೆ ಆರಂಭವಾದ ಇಲ್ಲಿನ ಪ್ರೌಢಶಾಲೆಯಿಂದ 85–86 ನೇ ಸಾಲಿನಲ್ಲಿ ಮೊದಲ ತಂಡ ಎಸ್ಸೆಸ್ಸೆಲ್ಸಿ ಕಟ್ಟಿತ್ತಾದರೂ ಯಾರೂ ಪಾಸಾಗದೆ ಸೊನ್ನೆ ಫಲಿತಾಂಶ ಬಂದಿತ್ತು.

ಆದರೆ ಈ ವರ್ಷ ಎಲ್ಲ ವಿಷಯಗಳಲ್ಲೂ ಉಪಾಧ್ಯಾಯರನ್ನು ಸರ್ಕಾರ ನೇಮಿಸಿದ್ದರಿಂದ ಅವರೆಲ್ಲರ ಪರಿಶ್ರಮದಿಂದ ಹಾಗೂ ಶಾಲಾಭಿವೃದ್ಧಿ ಸಮಿತಿಯವರು ಸಹ ತೀವ್ರ ಕಾಳಜಿ ವಹಿಸಿ ಅಧ್ಯಾಪಕ ವೃಂದಕ್ಕೆ ಹಲವು ರೀತಿಯಲ್ಲಿ ಸಲಹೆ–ಸಹಕಾರ ನೀಡಿದ್ದರಿಂದ ಈ ಬಾರಿ (86–87) ಶೇ. 39ರ ಫಲಿತಾಂಶ ಬಂದಿದ್ದು, ಇದು ಪೋಷಕ ವೃಂದಕ್ಕೆಲ್ಲ ಬಹಳ ಸಂತೋಷ, ಸಮಾಧಾನ ತಂದಿದೆ ಎಂದಿದ್ದಾರೆ ಎಂ. ವಿ. ಶಂಕರ್

ಬಸರಿಕಟ್ಟೆ ಶೇ. 9 ಹೆಚ್ಚು

ಇಲ್ಲಿನ ಸದ್ಗುರು ಪ್ರೌಢಶಾಲೆಯಲ್ಲಿ 90 ಜನ ಪರೀಕ್ಷೆಗೆ ಕೂತಿದ್ದು 77 ಮಂದಿ ಪಾಸಾಗಿ ಶೇ. 85.6 ಫಲಿತಾಂಶ ಬಂದಿದೆ. ಇದರಲ್ಲಿ 12 ಫಸ್ಟ್‌ಕ್ಲಾಸ್. ಕಳೆದ ವರ್ಷ ಇಲ್ಲಿ 76.5 ಫಲಿತಾಂಶ ಬಂದಿದ್ದು ಈ ಬಾರಿ ಶೇ. 9 ರಷ್ಟು ಸುಧಾರಣೆಯಾಗಿರುವುದು ಪ್ರಶಂಸನೀಯ.

ಕೊಪ್ಪ ಕಿರಿಯ ಕಾಲೇಜು: ಶೇ. 40 ಕ್ಕೆ ಏರಿಕೆ

ಇಲ್ಲಿನ ಕಿರಿಯ ಕಾಲೇಜಿನಲ್ಲೂ ಫಲಿತಾಂಶ ಕಳೆದ ವರ್ಷಕ್ಕಿಂತ ಗಣನೀಯವಾಗಿ ಸುಧಾರಿಸಿದ್ದು, ಶೇ. 40 ಪಾಸಾಗಿದೆ. 125 ರಲ್ಲಿ 50 ಮಂದಿ ಪಾಸಾಗಿ 7 ಜನ ಪ್ರಥಮ ದರ್ಜೆ ಪಡೆದಿದ್ದಾರೆ.

ಅಡ್ಡಗದ್ದೆ: ಪ್ರಗತಿ

ಶೃಂಗೇರಿ ತಾಲ್ಲೂಕಿನ ಅಡ್ಡಗದ್ದೆ (ತೊರೆಹಡ್ಲು) ಸರ್ಕಾರಿ ಪ್ರೌಢಶಾಲೆಯಲ್ಲೂ ಈ ಬಾರಿ ಫಲಿತಾಂಶ ಗಣನೀಯವಾಗಿ ಸುಧಾರಿಸಿರುವುದಾಗಿ ತಿಳಿದು ಬಂದಿದೆ. ಆರಂಭದಿಂದಲೂ ಅಧ್ಯಾಪಕರ ತೀವ್ರ ಕೊರತೆಯಿಂದ ನರಳುತ್ತಿರುವ ಈ ಶಾಲೆಯಲ್ಲಿ ಕಳೆದ ವರ್ಷ ಕೇವಲ ಶೇ 4 ರಷ್ಟು ಫಲಿತಾಂಶವಿದ್ದು, ಈ ಬಾರಿ ಶೇ. 30 ರ ಸಮೀಪ ಬಂದಿದೆ ಎನ್ನಲಾಗಿದೆ,

ಜಯಪುರ ಮತ್ತು ಹರಿಹರಪುರ ಪ್ರೌಢಶಾಲೆಗಳಲ್ಲಿ ಶೇ. 70, ಅಗಳಗಂಡಿಗೆ ಶೇ. 35 ಫಲಿತಾಂಶ ಬಂದಿರುವುದಾಗಿ ವರದಿಯಾಗಿದೆ.

ಸಚಿವರಿಗೆ ಮನವಿ

ಶಾಂತಿಗ್ರಾಮ: ಇಲ್ಲಿನ ಕುಡಿಯುವ ನೀರು ಮತ್ತು ವಿದ್ಯುತ್ ಸಮಸ್ಯೆ ನಿವಾರಿಸುವಂತೆ ಸಚಿವ ಬಿ.ಎಲ್.ಶಂಕರ್‌ರಿಗೆ ಗ್ರಾಮಸ್ಥರು ಮನವಿಯೊಂದನ್ನು ಸಲ್ಲಿಸಿದ್ದಾರೆ.

ಮಲ್ಲಿಕಾ, ನಂದಿನಿ ಕ್ರೀಡಾ ಶಾಲೆಗೆ ಆಯ್ಕೆ

ಕೊಪ್ಪ: ಇಲ್ಲಿನ ಪ್ರೌಢಶಾಲೆಯಲ್ಲಿ ಓದುತ್ತಿದ್ದು ಈಗಾಗಲೇ ರಾಜ್ಯಮಟ್ಟದಲ್ಲಿ ಸ್ಪರ್ಧಿಸಿ ರಾಷ್ಟ್ರಮಟ್ಟದಲ್ಲೂ ಸ್ಪರ್ಧಿಸಲು ಆಯ್ಕೆಯಾಗಿದ್ದ ಮಲ್ಲಿಕಾ ಈ ಬಾರಿ ಕೂಡಿಗೆಯ (ಕೊಡಗು ಜಿಲ್ಲೆ) ಕ್ರೀಡಾ ಶಾಲೆಗೆ ಆಯ್ಕೆಯಾಗಿದ್ದಾಳೆ.

ಅಂತೆಯೇ ಕುದುರೆಗುಂಡಿಯ ನಂದಿನಿಯೂ ಇದೇ ಶಾಲೆಗೆ ಆಯ್ಕೆಯಾಗಿದ್ದಾಳೆ. ಇವರುಗಳಿಗೆ ಉಚಿತ ಶಾಲಾ ಶಿಕ್ಷಣ, ಹಾಸ್ಟೆಲ್ ಸೌಲಭ್ಯ, ಕ್ರೀಡಾ ಉಡುಪುಗಳು ಮತ್ತಿತರ ಸೌಕರ್ಯಗಳ ಜೊತೆಗೆ ನುರಿತ ಕೋಚ್‌ಗಳಿಂದ ಉತ್ತಮ ತರಬೇತಿಯೂ ದೊರೆಯುತ್ತದೆ.

ಈಗಾಗಲೇ ರಾಷ್ಟ್ರ ಮಟ್ಟದ ಅಥ್ಲೆಟಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ಕೊಪ್ಪದ ಜೆ. ಎಸ್. ಗೀತಾ ಇದೇ ರೀತಿ ಚಿಕ್ಕಮಗಳೂರಿನ ಕ್ರೀಡಾ ಹಾಸ್ಟೆಲ್‌ಗೆ ಆಯ್ಕೆಯಾಗಿ ಕಾಲೇಜು ಶಿಕ್ಷಣವನ್ನೂ ಸಹ ಮುಂದುವರಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

ಕೊಪ್ಪ ಲಯನ್ಸ್‌ನಿಂದ 32 ಜೊತೆ ವಿವಾಹ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಆಶ್ರಯದಲ್ಲಿ ಮೇ 24 ರಂದು ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ 32 ಜೋಡಿಗಳು ಮದುವೆಯಾದರು. ಕಳೆದ ವರ್ಷ ಲಯನ್ಸ್ 33 ಜೋಡಿ ಮದುವೆಗಳನ್ನು ನೆರವೇರಿಸಿತ್ತು.

ಅವಳಿ ಕರುಗಳ ಜನನ

ಗುಡ್ಡೇತೋಟ: ಇಲ್ಲಿನ ನಾರಾಯಣ ನಾಯ್ಕ ಎಂಬವರ ಹಸುವೊಂದು ಈಚೆಗೆ ಅವಳಿ ಕರುಗಳನ್ನು ಹಾಕಿದ್ದು, ಎರಡೂ ಆರೋಗ್ಯವಾಗಿವೆ.

ಅರಣ್ಯ ರಕ್ಷಕರ ಸಂಘದ ನೂತನ ಪದಾಧಿಕಾರಿಗಳು

ಕೊಪ್ಪ: ಕರ್ನಾಟಕ ರಾಜ್ಯ ಅರಣ್ಯ ರಕ್ಷಕರ ಸಂಘದ ನೂತನ ಸಾಲಿಗೆ ಕೊಪ್ಪ ವಿಭಾಗದ ಟಿ. ವಿ. ಲಕ್ಷ್ಮೀನಾರಾಯಣ ಕೇಂದ್ರ ಸಂಘದ ಕೋಶಾಧಿಕಾರಿಯಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರು, ಸಲಹೆಗಾರರು ಸೇರಿ ಒಟ್ಟು 17 ಮಂದಿಯ ಕಾರ್ಯಕಾರಿ ಸಮಿತಿ ಆಯ್ಕೆಯಾಗಿದೆ.

ಸೇತುವೆ: ಗ್ರಾಮಸ್ಥರ ಕೃತಜ್ಞತೆ

ಕಲ್ಲುಗುಡ್ಡೆ: ಈ ಗ್ರಾಮದಲ್ಲಿ ನಾಗರಗುಂಡಿ ಹಳ್ಳಕ್ಕೆ ಅತ್ಯಾವಶ್ಯಕವಾಗಿದ್ದ ಸೇತುವೆಯನ್ನು 'ಸೇತು ಬಂಧನ' ಯೋಜನೆಯಡಿ 90,000 ರೂ. ವೆಚ್ಚದಲ್ಲಿ ಮಂಜೂರು ಮಾಡಿಸಿರುವ ಬಗ್ಗೆ ಶಾಸಕರಿಗೂ, ಲೋ|| ಇಲಾಖೆಗೂ ಇಲ್ಲಿನ ಗ್ರಾಮಸ್ಥರು ಕೃತಜ್ಞತೆ ಸಲ್ಲಿಸಿದ್ದಾರೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿ.ಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ.